ಶ್ರೀ ಬಿ. ಬಸವಲಿಂಗಪ್ಪ.—ಸರ್ಕಾರದಲ್ಲಿ ಯಾರ್ಯಾರು ಯಾವ ರೀತಿ ಅಸೋಸಿಯೇಷನ್ ಮಾಡಿ ಕೊಳ್ಳಬೇಕು ಅನ್ನುವುದಕ್ಕೆ ಒಂದು ರೂಲ್ಸ್ ಇದೆ. ಅದನ್ನು ತಾವು ಕೇಳಿ ತಿಳಿದು ಕೊಳ್ಳಬೇಕು. ಮತ್ತು ಫ್ಯಾಕ್ಟರಿಯಲ್ಲಿ ಕೆಲಸ ಮಾಡತಕ್ಕವರು ಯಾವರೀತಿ ಅಸೋಸಿಯೇಷನ್ ಮಾಡಿಕೊಳ್ಳಬೇಕು ಅನ್ನುವುದಕ್ಕೂ ಒಂದು ರೂಲ್ಸ್ ಇದೆ. [illegible]ನ್ನು ತಾವು ಓದಿ ತಿಳಿದುಕೊಳ್ಳಬೇಕು. ಅದಕ್ಕೂ ಇದಕ್ಕೂ ಸಂಬಂಧ ಕಲ್ಪಿಸುವುದಕ್ಕೆ ಹೋಗಬೇಡಿ.

Calling Attention to a matter of Urgent Public Importance:

re: Expliotation of private Educational Institutions in Bangalore and Mysore

ಶ್ರೀ ಟಿ.ಆರ್. ಶಾಮಣ್ಣ (ಬಸವನಗುಡಿ).— ಕೊಡುಗೆ, ಶುಲ್ಕ, ಹಾಗೂ ಅರ್ಹತೆ ಪಡೆದ ವಿದ್ಯಾರ್ಥಿಗಳಿಗೆ ಪ್ರವೇಶ ಅವಕಾಶವನ್ನು ನೀಡದಿರುವುದು ಹಾಗೂ ಇನ್ನೂ ಮುಂತಾದವುಗಳ ಬಗ್ಗೆ ಬೆಂಗಳೂರು, ಮೈಸೂರು ನಗರಗಳಲ್ಲಿರುವ ಶಿಕ್ಷಣ ಸಂಸ್ಥೆಯವರು ಶೋಷಣೆ ಮಾಡುತ್ತಿರುವ ವಿಚಾರಗಳ ಬಗ್ಗೆ ನಾನು ಮಾನ್ಯ ಶಿಕ್ಷಣ ಮಂತ್ರಿಗಳ ಗಮನವನ್ನು ಸೆಳೆಯುವುದಕ್ಕೆ ಇಚ್ಛಿಪಡುತ್ತೇನೆ.

ಶ್ರೀ ಬಿ. ಸುಬ್ಬಯ್ಯ ಶೆಟ್ಟಿ.—ಮಾನ್ಯ ಸದಸ್ಯರುಗಳಾದ ಶ್ರೀಮಾನ್ ಮಳ್ಳೂರು ಆನಂದರಾವ್ ಮತ್ತು ಶ್ರೀಮಾನ್ ರಾಂದೇವ್ ಅವರು ಇದೇ ವಿಚಾರದ ಬಗ್ಗೆ ಒಂದು ಕಾಲಿಂಗ್ ಅಟೆನ್‌ಷನ್ ಕೊಟ್ಟಿದ್ದಾರೆ. ಅವೆರಡನ್ನೂ ಸೇರಿಸಿ ನಾನು ಉತ್ತರ ಕೊಡುತ್ತೇನೆ ಎಂದು ನನ್ನ ಒಂದು ಸಲಹೆ.

ಶ್ರೀ ಮಳ್ಳೂರು ಆನಂದರಾವ್.—ನಮಗೆ ಅದರ ಕಾಪಿ ಕೊಟ್ಟರೆ ಒಳ್ಳೆಯದು. ಕಾಲಿಂಗ್ ಅಟೆನ್‌ಷನ್ ಕಾಪಿಯೊಂದನ್ನು ಕೊಡಿಸಿ.

SRI B. SUBBAIAH SHETTY.—Sir I beg to make the following statement :

There are two kinds of institutions—

(i) Recognised and Aided

(ii) Recognised but unaided.

It has come to the notice of Government that Private Educational Institutions collect donations and it is permissible under Rule 16 of Chapter 4 of the Grant-in-aid Code for Secondary Schools and there is also provision in the Grant-in-aid Code for primary schools subject to the condition that all monies so collected should be reflected in the accounts of the Institution. But in practice the receipts are passed in the name of the Societies which run the Inst tutions and the monies are taken to the accounts of the Societies, which are not subject to audit by the Department of Public Instruction. A comprehensive legislation is being considered to prevent such mal-practices. In unaided Private Educational Institutions, fees are being collected at higher rates. Government are seriously considering regulating the fee rates in Unaided Institutions through a legislation.

ಶ್ರೀ ಟಿ. ಆರ್. ಶಾಮಣ್ಣ.—ಮಾನ್ಯ ಅಧ್ಯಕ್ಷರೇ, ಈಗ ಮಾನ್ಯ ಸಚಿವರು ಕೊಟ್ಟಿರತಕ್ಕಂಥಾ ಉತ್ತರ ನೋಡಿದರೆ ಅದು ಯಾವರೀತಿಯಲ್ಲೂ ಸಹ ಪ್ರಯೋಜನವಾಗದೇ ಇರುವ ರೀತಿಯಲ್ಲಿ ಇರುವುದರಿಂದ ಅದರ ಬಗ್ಗೆ ನಾನು ವ್ಯಥೆ ಪಡಬೇಕಾಗಿದೆ. ಅವರಲ್ಲಿ ಮುಖ್ಯವಾಗಿ ಹೇಳಬೇಕಾದರೆ ಪೆಚ್ಚಿನ ಅಂಕಗಳನ್ನು ತೆಗೆದುಕೊಂಡಿರತಕ್ಕಂಥಾ ವಿದ್ಯಾರ್ಥಿಗಳಿಗೆ ಸೀಟುಗಳನ್ನು ಕೊಡುವ ಬಗ್ಗೆ ಅವರ ಉತ್ತರ

ದಲ್ಲಿ ಪ್ರಸ್ತಾಪ ಮಾಡಿಯೇ ಇಲ್ಲ. ನನ್ನ ಒಂದು ಮಾಹಿತಿ ಪ್ರಕಾರ ಡೊನೇಷನ್ ಮತ್ತು ಫೀಸನ್ನು ಹೆಚ್ಚಾಗಿ ತೆಗೆದುಕೊಳ್ಳಬೇಕು ಅನ್ನುವ ಒಂದು ಅಂಶ ಗ್ರಾಂಟ್ ಇನ್ ಕೋಡ್‌ನಲ್ಲಿ ಇಲ್ಲ. ಈಗ ಸರ್ಕಾರದ ವರು ಇಂಜನೀಯರಿಂಗ್ ಕಾಲೇಜು ಮತ್ತು ಮೆಡಿಕಲ್ ಕಾಲೇಜುಗಳಲ್ಲಿ ಎಷ್ಟು ಬೇಕಾದರೂ ಡೊನೇಷನ್ ತೆಗೆದುಕೊಳ್ಳಬಹುದು ಅನ್ನುವ ಒಂದು ಅವಕಾಶ ಮಾಡಿಕೊಟ್ಟಿದ್ದಾರೆ. ಇದು ಬಹಳ ಶೋಚನೀಯವಾದ ವಿಚಾರ. ಸ್ಟೇಟ್‌ನವರಿಗಾದರೆ ೫೦ ಸಾವಿರ ರೂಪಾಯಿ, ಹೊರಗಡೆಯವರಿಗಾದರೆ ೧ ಲಕ್ಷ ೨೫ ಸಾವಿರ ರೂಪಾಯಿ ಡೊನೇಷನ್ ಕೊಡಬೇಕು. ಇದು ಎಷ್ಟರಮಟ್ಟಿಗೆ ಜನಗಳಿಗೆ ಅನುಕೂಲವಾಗುತ್ತದೆ ಅನ್ನುವುದನ್ನು ಯೋಚನೆ ಮಾಡಬೇಕು. ಹಾಗೂ ಅನೇಕ ಶಾಲೆಗಳವರು ಗ್ರಾಂಟ್ ಇನ್‌ಕೋಡ್‌ನಲ್ಲಿ ಇಲ್ಲದೇ ಇದ್ದರೂ ಕೂಡ ಹೆಚ್ಚಿನ ಹಣವನ್ನು ತೆಗೆದುಕೊಳ್ಳುತ್ತಿದ್ದಾರೆ. ಇದರ ಬಗ್ಗೆ ಸರ್ಕಾರ ಏತಕ್ಕೆ ನಿಸ್ಸಹಾಯಕವಾಗಿದೆಯೋ ಗೊತ್ತಿಲ್ಲ. ಈಗ ಏಡ್ ತೆಗೆದುಕೊಳ್ಳುತಕ್ಕಂಥಾ ಅನೇಕ ಕಾಲೇಜುಗಳು ಕೂಡ ಯದ್ವಾ ತದ್ವಾ ಡೊನೇಷನ್ ಇತ್ಯಾದಿ ತೆಗೆದುಕೊಳ್ಳುತ್ತಾ ಇರುವುದರಿಂದ ಅನೇಕ ವಿದ್ಯಾರ್ಥಿಗಳು ಶೇಕಡ ೭೫ ನಂಬರ್‌ಗಳನ್ನು ತೆಗೆದುಕೊಂಡಿದ್ದರೂ ಸಹ ಪ್ರೈವೇಟ್ ಕಾಲೇಜುಗಳಲ್ಲಿ ಸೀಟು ಸಿಕ್ಕಿಲ್ಲಾ. ಈ ಬಗ್ಗೆ ಸರ್ಕಾರ ಗಮನಕ್ಕೆ ತೆಗೆದುಕೊಳ್ಳದೇ ಹೋದರೆ ನಮ್ಮ ಮಕ್ಕಳು ಬಹಳ ಕಷ್ಟಪಡಬೇಕಾದ ಪರಿಸ್ಥಿತಿ ಬಂದಿದೆ, ಇದರ ಬಗ್ಗೆ ಸರ್ಕಾರ ಸ್ವಲ್ಪವೂ ಆಸಕ್ತಿ ತೋರಿಸದೇ ಇರತಕ್ಕಂಥಾದ್ದು ಬಹಳ ಶೋಚನೀಯವಾದ ವಿಚಾರ.

೧೦-೫೦ ಎ. ಎಂ.

ಆದ್ದರಿಂದ ನಾನು ಮಾನ್ಯಮಂತ್ರಿಗಳನ್ನು ಕೇಳಕೊಳ್ಳುವುದು ಇಷ್ಟೆ, ಅವರು ಧೈರ್ಯ ಮಾಡಿ ಬೇರೆ ರಾಜ್ಯಗಳಲ್ಲಿ ಯಾವರೀತಿಯಾಗಿ ಡೊನೇಷನ್ ತೆಗೆದುಕೊಳ್ಳುವುದರ ಬಗ್ಗೆ ವಿತಿ ಇಟ್ಟಿದ್ದಾರೆ, ಆ ರೀತಿ ವಿತಿಯನ್ನು ಮಾಡದೇ ಹೋದ ಪಕ್ಷದಲ್ಲಿ ನಾವು ಒಂದು ಚಳುವಳಿಯನ್ನೇ ಮಾಡಬೇಕಾದ ಪರಿಸ್ಥಿತಿ ಬರುತ್ತದೆ. ಮಾನ್ಯ ಮಂತ್ರಿಗಳು ಸರ್ಕಾರೀ ಶಾಲೆಗಳಲ್ಲಿ ಗುಣಮಟ್ಟವನ್ನು ಹೆಚ್ಚಿಸುವುದಕ್ಕೆ ಏನು ಕಾರ್ಯಕ್ರಮ ತೆಗೆದುಕೊಂಡಿದ್ದಾರೆ ಇದು ಒಂದನೆಯದು, ಎರಡನೆಯದು ಗ್ರಾಂಟ್ ಇನ್ ಏಡ್ ಸ್ಕೂಲುಗಳಲ್ಲಿ ಅವರಿಗೆ ಇರತಕ್ಕಂಥ ವಿತಿಗಿಂತ ಹೆಚ್ಚಿಗೆ ಡೊನೇಷನ್ಸ್ ತೆಗೆದುಕೊಳ್ಳುವುದಕ್ಕೆ ಅವಕಾಶ ಮಾಡಿಕೊಟ್ಟಿದ್ದಾರೆ, ಮೂರನೆಯದು ಅನ್ ಏಡೆಡ್ ಸ್ಕೂಲುಗಳಿಗೆ ಯಾವ ವಿಧವಾದ ಹತೋಟಿಯನ್ನು ಇಟ್ಟುಕೊಂಡಿದ್ದೀರಿ ಎನ್ನುವುದರ ಬಗ್ಗೆ ನಮಗೆ ವಿವರಣೆ ಬೇಕು. ಕಳೆದ ಮೂರು ನಾಲ್ಕುದಿವಸಗಳಿಂದ ಜನರು ನಮ್ಮ ಅನೇಕ ಸ್ನೇಹಿತರುಗಳನ್ನು, ನಮಕ್ಕಳಿಗೆ ಸೀಟುಕೊಡಿಸಿ ಎಂದು ಪೆಸ್ಟರ್ ಮಾಡುತ್ತಿದ್ದಾರೆ. ನಾವು ಬಹಳ ನಿಸ್ಸಾಹಯಕ ಪರಿಸ್ಥಿತಿಗೆ ಬಂದಿದ್ದೇವೆ. ಇದರ ಬಗ್ಗೆ ಏನಾದರೂ ಯೋಚನೆ ಮಾಡುತ್ತೀರಾ? ಸರ್ಕಾರದವರು ಇದರ ಬಗ್ಗೆ ಏನಾದರೂ ಯೋಚನೆ ಮಾಡದಿದ್ದರೆ ನಾವು ಮಕ್ಕಳಿಗೆ ವಿಂಡಿತ ವಾಗಿಯೂ ದ್ರೋಹ ಮಾಡಿದಂತಾಗುತ್ತದೆ ಎಂದು ಒತ್ತಾಯಪೂರ್ವಕವಾಗಿ ಹೇಳಿ, ನಾನು ಕೇಳಿದ ಮೂರು ವಿಷಯಗಳ ಬಗ್ಗೆ ಕ್ಲಾರಿಫಿಕೇಷನ್ ಕೊಡಬೇಕು ಎಂದು ಪ್ರಾರ್ಥನೆ ಮಾಡಿಕೊಂಡು ನನ್ನ ಮಾತುಗಳನ್ನು ಮುಗಿಸುತ್ತೇನೆ.

ಶ್ರೀ ಮಳ್ಳೂರು ಆನಂದರಾಜ್.—ಇಲ್ಲಿ ಮಾನ್ಯ ಮಂತ್ರಿಗಳು ಮಾಡಿರತಕ್ಕ ಸ್ಟೇಟ್‌ಮೆಂಟ್ ಬಹಳ ದೂರಗಾಮಿ ಪರಿಣಾಮವನ್ನು ಬೀರುತ್ತದೆ. ತಾವು Private educational Institutions collect donations and it is permissible under Rule 16 of chapter 4 of the Grant in Aid Code for Secondary Schools. ಎಂದು ಹೇಳಿದ್ದೀರಿ. ದಯವಿಟ್ಟು ಯಾವ ರೂಲ್ಸ್‌ನಲ್ಲಿ ಇದು ಹೇಳಿದ್ದಾರೆ ಎನ್ನುವುದನ್ನು ಹೇಳಬೇಕು. ಚಾಪ್ಟರ್ ೧೮ರಲ್ಲಿ ಏನೇನು ಫೀಸ್ ಕಲೆಕ್ಟ್ ಮಾಡಬೇಕು ಎಂದು ನಿರ್ದಿಷ್ಟವಾಗಿ, ನಿರ್ದಿಷ್ಟ ಮಾಡಿದ್ದಾರೆ. ಇದನ್ನು ಬಿಟ್ಟು ಡೊನೇಷನ್ ತೆಗೆದುಕೊಳ್ಳಬೇಕು ಎನ್ನುವುದು ಇಲ್ಲವೇ ಇಲ್ಲ. ಎಕ್ಸಾಮಿನೇಷನ್ ಫೀಸ್ ಇತ್ಯಾದಿಗಳನ್ನು ಕಲೆಕ್ಟ್ ಮಾಡಬೇಕಾದರೆ ಜಾಯಿಂಟ್ ಡೈರೆಕ್ಟರ್ ಅವರ ಪರ್ಮಿಷನ್ ತೆಗೆದುಕೊಂಡು ಮಾಡಬೇಕು ಎಂದು ಹೇಳಿದೆ. ಈಗ ಮಾನ್ಯ ಮಂತ್ರಿಗಳು ಡ್ಯಾಮೇಜಿಂಗ್ ಸ್ಟೇಟ್‌ಮೆಂಟನ್ನು ಮಾಡಿದ್ದಾರೆ. ಕಾನ್ಸ್‌ಟಿಟ್ಯೂಷನ್ ಆಬ್ಲಿಗೇಷನ್ ಪ್ರಕಾರ ಸೆಕೆಂಡರಿ ಎಜುಕೇಷನ್‌ನ ವರೆಗೆ ಉಚಿತ ಶಿಕ್ಷಣ ಕೊಡಬೇಕು ಎಂದು ಹೇಳುವುದನ್ನು ನೀವು ಒಪ್ಪಿಕೊಂಡಿದ್ದೀರಿ. ಆದರೆ ಗ್ರಾಂಟ್ ಇನ್ ಕೋಡ್‌ನಲ್ಲಿ ಡೊನೇಷನ್ ಕಲೆಕ್ಟ್ ಮಾಡುವುದಕ್ಕೆ ಅವಕಾಶ ಇದೆಯೆಂದು ಚಾಪ್ಟರ್ ೪ ನ್ನು ಕೋಟ ಮಾಡಿದ್ದೀರಿ. ಈ ಪ್ರಾವಿಷನ್ ಎಲ್ಲಿದೆ ಎಂದು ಹೇಳಿದರೆ ಮುಂದೆ ನಾನು ಪ್ರಶ್ನೆ ಕೇಳಬಹುದು.

SRI B. SUBBIAH SHETTY.—I have no objection in reply to each member's points, But what I say is it will not be an orderly function if I go on replying to each member's points as and when they ask. If all the signatories to the notice seek the clarifications at a time, I note them and shall reply to them once and for all. I want a ruling from the Chair regarding this. However, I have no objection to repyl in either way.

SRI MALLUR ANANDA RAO.—If you answer the first question put by me, then it will enable me to proceed further in the matter. ನಮಗೆ ತಮ್ಮ ರಕ್ಷಣೆ ಬೇಕು.

ಅಧ್ಯಕ್ಷರು.— ಮಾನ್ಯ ಶಾಮಣ್ಣನವರೂ ಒಂದು ಸ್ಪಷ್ಟೀಕರಣ ಕೇಳಿದ್ದಾರೆ. ನೀವೂ ಸಹ ಕೇಳಿದ್ದೀರಿ. ಇತರೆ ಸದಸ್ಯರುಗಳು ಪ್ರಶ್ನೆ ಕೇಳುವುದಕ್ಕೆ ಮೊದಲು ಮಾನ್ಯಮಂತ್ರಿಗಳು ಉತ್ತರ ಹೇಳಿದರೆ, ಮಾನ್ಯಸದಸ್ಯರುಗಳು ಬೇರೆ ಪ್ರಶ್ನೆಗಳನ್ನು ಕೇಳಬಹುದು

ಶ್ರೀ ಮಳ್ಳೂರು ಆನಂದರಾವ್.—ಮಾನ್ಯ ಮಂತ್ರಿಗಳು ಹೇಳುವುದು ಏನಂದರೆ, ನಾವೆಲ್ಲರು ಏನೇನು ಕೇಳಬೇಕು ಅದನ್ನೆಲ್ಲಾ ಒಂದೇ ಸಾರಿ ಕೇಳಿದರೆ ಅವರೂ ಒಂದೇ ಸಾರಿ ಉತ್ತರ ಕೊಡುತ್ತೇನೆಂದು ಮಾನ್ಯಮಂತ್ರಿಗಳು ಡ್ಯಾಮೇಂಜಿಂಗ್ ಸ್ಟೇಟಮೆಂಟ್ ಮಾಡಿದ್ದಾರೆ. ಪ್ರಚಲಿತವಾದ ಕಾನೂನಿನ ವಿರುದ್ಧವಾಗಿದೆ ಅದು. ಮೊದಲು ಅವರು ನನಗೆ ಸ್ಪಷ್ಟೀಕರಿಸಿ ನಂತರ ಅವರ ಮೇಲೆ ನಮಗೆ ಪ್ರಶ್ನೆಕೇಳುವುದಕ್ಕೆ ಸಾಧ್ಯ.

SRI MICHAEL B. FERNANDES.—If the first question is answered the whole line of discussion will be changed.

SRI B. SUBBIAH SHETTY.—I have absolutely no objection for this suggestion.

ಶ್ರೀಮತಿ ಎಸ್. ಪ್ರಮಿಳ.—ಮಾನ್ಯ ಮಂತ್ರಿಗಳು ರೂಲ್ ೧೬ ಚಾಪ್ಟರ್ ೪ ನ್ನು ಕೋಟ್ ಮಾಡಿದ್ದಾರೆ. ಆದ್ದರಿಂದ ಅವರು ಹೇಳುವಂಥ ಅಧಿಕಾರ ಯಾವ ಪ್ರಾವಿಷನ್‌ನಿಂದಬಂತು?

SRI B. SUBBIAH SHETTY.—What I told was very simple i. e., I shall answer at the end to the points raised by the hon'ble members. That is the usual practice followed during the last session. The usual practice followed is that when a call attention is made signed by many members then the clarification is asked by all and reply is given. Anyway I have no objection to answer.

With regard to the point raised by Sri Ananda Rao, I may read for his benefit rule 16: "The management shall credit the prescribed fees collected in the treasury as prescribed in rule 69. The other amounts collected by way of grants, donations, interest on endowment deposits and other items realised by the institution shall be credited to the accounts of the institution and shall be reflected in annual receipts and expenditure statement of the institution." So here itself it is said that grants, donations and whatever they may receive accounts should be produced. That is why it has been said that they are not barred from collecting donations, This is the present Grant-in-aid Code, I am telling only the present Grant-in-aid Code.

SRI MALLUR ANANDA RAO.—Chapter IV prescribes the procedure for remitting the amount to different accounts. Please read page 26 of Chapter 10. ನಾನು ಹೇಳುವುದು, ಪುಟ ೨೬ರಲ್ಲಿ ಚಾಪ್ಟರ್ ೪ ನ್ನು ತೆಗೆದು ನೋಡಿ. ಅದರಲ್ಲಿ ಯೂನಿಯನ್ ಫೀಸ್ ತೆಗೆದುಕೊಳ್ಳಬೇಕಾದರೆ, ಮ್ಯಾಗಜೀನ್ ಫೀ ತೆಗೆದುಕೊಳ್ಳಬೇಕಾದರೆ ಜಾಯಿಂಟ್ ಡೈರೆಕ್ಟರ್ ಅವರ ಅನುಮತಿ ತೆಗೆದುಕೊಳ್ಳಬೇಕು ಎಂದು ಇದೆ. ಆದರೆ ಪ್ರೈವೇಟ್ ಸ್ಕೂಲುಗಳವರು ಇಷ್ಟಬಂದ ಹಾಗೆ ಡೊನೇಷನ್ ತೆಗೆದುಕೊಳ್ಳಬೇಕು ಎಂದು ನೀವು ಅನುಮತಿ ಕೊಡುತ್ತಿದ್ದೀರಿ.

In the fees structure, you have prescribed every thing to the last pie but not donation. They have to collect examination fees, association fees and the magazine fees with the permission of the Joint Director ಸೆಕೆಂಡರಿ ಎಜುಕೇಷನ್‌ನವರೆಗೆ ಫ್ರೀ ಎಜುಕೇಷನ್ ಕೊಡಬೇಕು ಎಂದು ಕಾನ್ಸ್‌ಟಿಟ್ಯೂಷನ್‌ಲ್ ಆಬ್ಲಿಗೇಷನ್, ಇದೆ. ಫ್ರೀ ಎಜಕೇಷನ್ ಕೊಡಬೇಕು ಎನ್ನು ವುದರ ಅರ್ಥ ಏನು? ನೀವು ಎಷ್ಟ ಬೇಕಾದರೂ ಡೊನೇಷನ್ ವಸೂಲು ಮಾಡಿಕೊಳ್ಳ ಬಹುದು ಎಂದು ಅರ್ಥವೇ? ಇದರ ಬಗ್ಗೆ ನಾನು ಮೆಚ್ಚಿಗೆ ಹೇಳುವುದಕ್ಕೆ ಹೋಗುವದಿಲ್ಲ.

ಶ್ರೀ ಬಿ. ಸುಬ್ಬಯ್ಯ ಶೆಟ್ಟಿ.—ಇನ್ನು ಮಾನ್ಯ ಶಾಮಣ್ಣನವರು ಇದರ ಬಗ್ಗೆ ಬಹಳಷ್ಟು ಕಳಕಳಿಯನ್ನು ವ್ಯಕ್ತಪಡಿಸಿದ್ದಾರೆ. ಈಗಿನ ಗ್ರಾಂಟ್-ಇನ್-ಏಡ್ ಕೋಡ್‌ನಲ್ಲಿ ಡೊನೇಷನ್ ಬಗ್ಗೆ ಏನು ಹೇಳಿದೆ, ಅದನ್ನು...

ಶ್ರೀ ಮಳ್ಳೂರು ಆನಂದರಾವ್.- ಈಗಿನ ಗ್ರಾಂಟ್-ಇನ್-ಏಡ್ ಕೋಡ್‌ನಲ್ಲಿ ಡೊನೇಷನ್ ವಸೂಲು ಮಾಡಬೇಕೆಂದು ಹೇಳಿಲ್ಲ.

ಶ್ರೀ ಬಿ. ಸುಬ್ಬಯ್ಯ ಶೆಟ್ಟಿ.—ಗ್ರಾಂಟ್-ಇನ್-ಏಡ್ ಕೋಡ್‌ನಲ್ಲಿ ಏನು ನಮೂದು ಮಾಡಿದೆ, ಅದನ್ನು ತೋರಿಸಿದ್ದೇನೆ. ಮುಖ್ಯವಾಗಿ ನಮ್ಮ ಗಮನಕ್ಕೆ ಬಂದಿರುವಂತೆ ಈ ಇಂಗ್ಲೀಷ್ ಮೀಡಿಯಂ ಶಾಲೆಗಳಲ್ಲಿ ಡೊನೇಷನ್ ತೆಗೆದುಕೊಳ್ಳುತ್ತಿದ್ದಾರೆ. ಈ ಬಗ್ಗೆ ಮಂಗಳೂರಿನಿಂದಲೂ ದೂರುಗಳು ಬಂದಿವೆ. ಆದರೆ ಬೆಂಗಳೂರಿನಲ್ಲಿ ಈ ಡೊನೇಷನ್ ಸಿಸ್ಟಮ್ ಬಹಳ ಪ್ರಾಮುಖ್ಯವಾಗಿ ನಡೆಯುತ್ತಿದೆ. ಇಂಗ್ಲೀಷ್ ಮೀಡಿಯಂ ಶಾಲೆಗಳಲ್ಲಿಯೇ ಈ ಪದ್ಧತಿ ಇದೆ ಎಂಬುದು ನಮಗೆ ತಿಳಿದುಬಂದಿದೆ. ಇದನ್ನು ಕಂಟ್ರೋಲ್ ಮಾಡಬೇಕೆಂಬ ಉದ್ದೇಶ ಸರ್ಕಾರಕ್ಕಿದೆ. ಈ ವಿಚಾರವನ್ನು ನಾನು ಈ ಮುನ್ನವೇ ಅನೇಕ ಸಲ ತಿಳಿಸಿದ್ದೇನೆ. I am not for collecting the donation indiscriminately even by these private English medium schools. ಈ ಬಗ್ಗೆ ನಮಗೆ ದೂರು ಗಳು ಬರುತ್ತಿವೆ. ಕೆಲವು ಅನ್-ಏಡೆಡ್ ಸಂಸ್ಥೆಗಳಿವೆ. ಇವರು ಏನು ಹೇಳುತ್ತಾರೆಂದರೆ, ನಮಗೆ ಸರ್ಕಾರದಿಂದ ಸಹಾಯ ಧನ ಕೊಡುತ್ತಿಲ್ಲ, ಆದಕಾರಣ ನಾವು ಡೊನೇಷನ್ ತೆಗೆದುಕೊಂಡು ನಮಗೆ ಖರ್ಚು ಬಂದಂತೆ ನಡೆಸುತ್ತೇವೆಂದು ಹೇಳುತ್ತಾರೆ. ಇದನ್ನು ಸರ್ಕಾರ ಖಂಡಿತವಾಗಿ ಒಪ್ಪುವುದಿಲ್ಲ. ಸಹಾಯ ಧನ ಕೊಡಲಿ, ಅಥವಾ ಕೊಡದಿರಲಿ, ಇದರ ಮೇಲೆ ಸರ್ಕಾರದ ನೀತಿ ಹೊಂದಿಕೊಂಡಿಲ್ಲ. ಸರ್ಕಾರದ ನೀತಿ ಈ ರಾಜ್ಯದಲ್ಲಿ ಮಕ್ಕಳಿಗೆ ವಿದ್ಯೆ ಯಾವ ರೀತಿ ಸಿಗಬೇಕೋ ಆ ಒಂದು ರೀತಿಯಲ್ಲಿ ಸಿಗಬೇಕಾಗಿದೆ. ಒಂದು ನೀತಿಯ ಮೇಲೆ ಈ ವಿದ್ಯಾಭ್ಯಾಸ ಪದ್ಧತಿಯನ್ನು ಆಳವಡಿಸಬೇಕಾಗಿದೆಯೇ ಹೊರತು, ಇದು ಏಡ್ ಆಥವಾ ನಾಟ್-ಏಡ್ ಆಧಾರದ ಮೇಲೆ ಹೊಂದಿಕೊಂಡಿಲ್ಲವೆಂಬುದು ನನ್ನ ಸ್ಪಷ್ಟವಾದ ಅಭಿಪ್ರಾಯ. ಇದರ ಬಗ್ಗೆ ಕೂಲಂಕುಷವಾಗಿ ಪರಿಶೀಲನೆ ಮಾಡಬೇಕೆಂಬ ಉದ್ದೇಶದಿಂದ ಮತ್ತು ಇದನ್ನು ಕಂಟ್ರೋಲ್ ಮಾಡಬೇಕೆಂಬ ಉದ್ದೇಶದಿಂದ ಒಂದು ತಜ್ಞರ ಕಮಿಟಿಯನ್ನು ಇದಕ್ಕಾಗಿ ನೇಮಿಸಬೇಕೆಂದಿದ್ದೇವೆ. ಈಗ ಇದನ್ನು ಕಂಟ್ರೋಲ್ ಮಾಡಲು ಸರ್ಕಾರಕ್ಕೆ ಕಾನೂನಿನ ಶಕ್ತಿ ಇಲ್ಲ. ಮೊದಲು ಕಾನೂನಿನ ಶಕ್ತಿಯನ್ನು ಪಡೆದುಕೊಳ್ಳಬೇಕಾಗುತ್ತದೆ. ಇದರ ಬಗ್ಗೆ ಬೆಂಗಳೂರಿನ ಶಾಸಕರು ಕೂಡ ಒಂದು ಮನವಿಯನ್ನು ಸರ್ಕಾರಕ್ಕೆ ಕೊಟ್ಟು ಆದರಲ್ಲಿ ಕೆಲವು ಸೂಚನೆಗಳನ್ನು ಕೊಟ್ಟಿದ್ದಾರೆ. ಅದರ ಪ್ರಕಾರ ಒಂದು ತಜ್ಞರ ಕಮಿಟಿಯನ್ನು ರಚನೆ ಮಾಡಿ, ಅವರು ಇದರ ಬಗ್ಗೆ ಕೂಲಂಕುಷವಾಗಿ ಪರಿಶೀಲನೆ ಮಾಡಿ ಇದನ್ನು ಯಾವ ರೀತಿ ಕಂಟ್ರೋಲಿಗೆ ತರಬಹುದೆಂಬ ಬಗ್ಗೆ ಸಲಹೆ ಕೊಡಬೇಕೆಂದು ಮಾಡಿ, ಕೊನೆಗೆ ಈ ಸದನದಲ್ಲಿ ಒಂದು ಸಮಗ್ರವಾದ ಶಾಸನವನ್ನು ತಂದು ಇದನ್ನು ಕಂಟ್ರೋಲ್ ಮಾಡಬೇಕೆಂಬ ಉದ್ದೇಶ ಸರ್ಕಾರಕ್ಕಿದೆ.

ಶ್ರೀ ಮಳ್ಳೂರು ಆನಂದರಾವ್.—ಮಾನ್ಯ ಮಂತ್ರಿಗಳಿಗೆ ಈ ಬಗ್ಗೆ ಸಂಬಂಧಪಟ್ಟ ಅಧಿಕಾರಿಗಳು ಸರಿಯಾದ ರೀತಿಯಲ್ಲಿ ಮಾರ್ಗದರ್ಶನ ಮಾಡಿಲ್ಲವೆಂದು ದುಃಖದಿಂದ ಹೇಳಬೇಕಾಗುತ್ತದೆ. ಫಾಪ್ಪರ್-ಳರಲ್ಲಿ "Management shall credit the prescribed fee collected into the Treasury as prescribed in Rule 59" ಎಂದು ಹೇಳಿದೆ. ಅಕಸ್ಮಾತ್ ಯಾರಾದರು ಡೊನೇಷನ್ ಕೊಟ್ಟರೆ ಆ ಹಣವನ್ನು ಎಲ್ಲಿ ಕಟ್ಟಬೇಕು ಎಂದು ಒಂದು ಪ್ರೊಸೀಜರ್ ಮಾಡಿದ್ದರೆ ಚೆನ್ನಾಗಿರುತ್ತಿತ್ತು. ಈ ವಿಚಾರದಲ್ಲಿ ವಿದ್ಯಾಧಿಕಾರಿಗಳಿಗೆ ಏನು ಹೇಳಬೇಕೋ ಗೊತ್ತಿಲ್ಲ. ನಾನು ಹತ್ತು ವರ್ಷಗಳ ಕಾಲ ಹೆಡ್‌ಮಾಸ್ಟರ್ ಆಗಿ ಕೆಲಸ ಮಾಡಿದ್ದೇನೆ. ಆದರ ಒಂದು ಅನುಭವದಿಂದ ಹೇಳ ಬೇಕೆಂದರೆ, ಈ ಖಾಸಗಿ ಶಿಕ್ಷಣ ಸಂಸ್ಥೆಗಳವರು ವಸೂಲಿ ಮಾಡುವ ಹಣದ ವಿವರಗಳನ್ನು ಈ ಅಧಿಕಾರಿ ಗಳು ಸರಿಯಾಗಿ ಪರಿಶೀಲನೆ ಮಾಡಿ ನೋಡುತ್ತಿಲ್ಲ. ನಿಮ್ಮ ಶಿಕ್ಷಣ ಅಧಿಕಾರಿಗಳಲ್ಲಿ ಶೇಕಡಾ ೮೦ ರಷ್ಟು ಅಧಿಕಾರಿಗಳು ಇಂದು ಬದುಕಿರುವುದು ಈ ಖಾಸಗಿ ಶಿಕ್ಷಣ ಸಂಸ್ಥೆಗಳಿಂದ ಲಂಚ ಹೊಡೆದುಕೊಂಡು. ಆದಕಾರಣ ತಾವು ಅವರ ಮಾತನ್ನು ಕೇಳಬೇಡಿ. ನಿಮಗೆ ಎಷ್ಟು ಮಾಹಿತಿ ಬೇಕಾದರೂ ನಾನು ಕೊಡುತ್ತೇನೆ. ಅದು ಬೇರೆ ಮಾತು. ಈಗ ತಾವು ಹೇಳಿದ್ದನ್ನು ಸರಿಪಾಡಿಕೊಳ್ಳಿ. ಏಕೆಂದರೆ, ಅನ್-ಏಡೆಡ್ ಸಂಸ್ಥೆಗಳ ಬಗ್ಗೆ ತಾವು ಹೇಳಿದ್ದು ನನ್ನ ಮನಸ್ಸಿಗೆ ಹಿಡಿಸಲಿಲ್ಲ. ಅನ್-ಏಡೆಡ್ ಸಂಸ್ಥೆ ಗಳಿಗೆ ಸರ್ಕಾರದಿಂದ ಸಹಾಯ ಬರುವುದಿಲ್ಲ, ಆದ್ದರಿಂದ ಅವರು ಎಷ್ಟು ಬೇಕಾದರೂ ಹಣ ವಸೂಲು ಮಾಡುತ್ತಾರೆಂದು ತಾವು ಹೇಳತಕ್ಕದ್ದು ಮೂಲತಃ ತಪ್ಪು. ಅಧಿಕಾರಿಗಳ ಮನಸ್ಸಿನಲ್ಲಿಯೂ ಸಹ ಇದೇ ಅಭಿಪ್ರಾಯವಿದೆ. ಇದಕ್ಕೆ ನನ್ನ ಒಂದು ಸಲಹೆ ಏನೆಂದರೆ, ಈ ಅನ್-ಏಡೆಡ್ ಶಾಲೆಗಳನ್ನು ಯಾರಾದರು ಪ್ರಾರಂಭ ಮಾಡಬೇಕಾದರೆ, ಅದಕ್ಕೆ ಸರ್ಕಾರದವರು ರೆಕಗ್ನಿಷನ್ ಕೊಡಬೇಕಾಗುತ್ತದೆ. ಆ ಸಮಯದಲ್ಲಿ that they should adhere to the Grant-in-Aid Code ಎಂಬತಕ್ಕಂಥ ಒಂದು ಕಂಡೀಷನ್ ಹಾಕಬೇಕು. ಹೆಚ್ಚಿಗೆ ಫೀ ಕಲೆಕ್ಟ್ ಮಾಡುವಂತಿಲ್ಲವೆಂದು ಶರತ್ತು ಹಾಕಬೇಕು. ಆದರೆ ನಿಮ್ಮ ಅಧಿಕಾರಿಗಳು ಇದನ್ನು ಒತ್ತಾಯ ಮಾಡುವುದಿಲ್ಲ. ಕೆಲವು ಖಾಸಗೀ ಸಂಸ್ಥೆಗಳಿಗೆ ತಾವು ಗ್ರಾಂಟ್ ಕೊಡುತ್ತೇವೆಂದು ಹೇಳಿದರೂ ಸಹ ಅವರು ತೆಗೆದುಕೊಳ್ಳುವುದಿಲ್ಲ. ಏಕೆಂದರೆ ಅದಕ್ಕೆ ನೂರು ಪಟ್ಟು ಹೆಚ್ಚಾಗಿ ಹಣವನ್ನು ಡೊನೇಷನ್ ಮೂಲಕ ಅವರು ವಸೂಲು ಮಾಡು ತ್ತಾರೆ. ಇದಕ್ಕೆ ಒಂದು ಉದಾಹರಣೆ ಕೊಡಬೇಕೆಂದರೆ, ಕಿಂಡರ್-ಗಾರ್ಟನ್ ಸ್ಕೂಲಿನವರು ಒಂದು ಸಾವಿರ ರೂಪಾಯಿಗಳನ್ನು ಡೊನೇಷನ್ ರೂಪದಲ್ಲಿ ತೆಗೆದುಕೊಳ್ಳುತ್ತಿದ್ದಾರೆ.

ಅಧ್ಯಕ್ಷರು.—ತಾವು ಸ್ಪಷ್ಟೀಕರಣ ಕೇಳಿ.

ಶ್ರೀ ಮಳ್ಳೂರು ಆನಂದರಾವ್.— ಅನ್-ಏಡೆಡ್ ಶಾಲೆಗಳಾದರೆ ಎಷ್ಟು ಬೇಕಾದರೂ ಡೊನೇ ಷನ್ ತೆಗೆದುಕೊಳ್ಳಬಹುದೆಂದು ಅವರು ಹೇಳಿದ್ದರಿಂದ ಇದನ್ನು ಹೇಳಬೇಕಾಯಿತು. ಮಾನ್ಯ ಮಂತ್ರಿ ಗಳು ಈ ಬಗ್ಗೆ ಕಾಂಪ್ರಹೆನ್ಸಿವ್ ಲೆಜಿಸ್ಲೇಷನ್ ತರುತ್ತೇವೆಂದು ಹೇಳಿದರು. ಕಾಂಪ್ರಹೆನ್ಸಿವ್ ಲೆಜಿಸ್ಲೇಷನ್ ಎಂದರೆ ಏನು ? ಇದಕ್ಕೂ ಮೊದಲು ಮಾನ್ಯ ಮಂತ್ರಿಗಳು ಇದನ್ನು ಬ್ಯಾನ್ ಮಾಡುತ್ತೇ ವೆಂದು ಹೇಳಿದ್ದು ಪ್ರಜಾವಾಣಿ ಪತ್ರಿಕೆಯಲ್ಲಿ ವರದಿಯಾಗಿತ್ತು.

ಶ್ರೀ ಬಿ. ಸುಬ್ಬಯ್ಯ ಶೆಟ್ಟಿ.— ನಾನು ಹೇಳಿದಂತೆ ಪತ್ರಿಕೆಯಲ್ಲಿ ವರದಿ ಬಂದಿಲ್ಲ. ನಾನು ಆ ರೀತಿ ಹೇಳಲಿಲ್ಲ. ಇದನ್ನು ತೊಡೆದು ಹಾಕುತ್ತೇನೆಂದು ನಾನು ಹೇಳಲಿಲ್ಲ. ಕಂಟ್ರೋಲ್ ಮಾಡುತ್ತೇ ವೆಂದು ಹೇಳಿದೆ. ಇದನ್ನು ಕಂಟ್ರೋಲ್ ಮಾಡಬೇಕಾದರೂ ಸಹ ನಮಗೆ ಲೆಜಿಸ್ಲೇಟಿವ್ ಶಕ್ತಿ ನಮಗೆ ಇಲ್ಲ, ಆದಕಾರಣ ಈ ಬಗ್ಗೆ ಒಂದು ಆರ್ಡರ್ ಹೊರಡಿಸಿ ಏನೂ ಮಾಡುವುದಕ್ಕಾಗುವುದಿಲ್ಲ, ಆದಕ್ಕಾಗಿ ಲೆಜಿಸ್ಲೇಟಿವ್ ಶಕ್ತಿ ಪಡೆದುಕೊಳ್ಳುತ್ತೇವೆಂದು ಹೇಳಿದ್ದೇನೆ. ಅಷ್ಟೇ ಹೊರತು ಇದನ್ನು ತೊಡೆದು ಹಾಕುತ್ತೇನೆಂದು ನಾನು ಎಂದಿಗೂ ಹೇಳಲಿಲ್ಲ.

ಶ್ರೀ ಸಿ. ಎಂ. ಇಬ್ರಾಹಿಂ.—ಮಾನ್ಯ ಮಂತ್ರಿಗಳು ಈ ಬಗ್ಗೆ ಒಂದು ಸ್ಟೇಟ್‌ಮೆಂಟ್ ಮಾಡಿ ದರು. ಸರ್ಕಾರದ ಶಾಲೆಗಳು ಸರಿಯಾಗಿ ನಡೆಯುತ್ತಿದ್ದರೆ ಸಾವಿರಾರು ರೂ.ಗಳನ್ನು ಕೊಟ್ಟು ಖಾಸಗೀ ಶಾಲೆಗಳಿಗೆ ಹೋಗಿ ಸೇರುವ ಅವಶ್ಯಕತೆಯೇ ಬರುತ್ತಿರಲಿಲ್ಲ. ಆದರೆ ಇಂದು ಸರ್ಕಾರದ ಶಾಲೆಗಳು ದೊಡ್ಡಿಯಂತಿವೆ. ೭೫-೭೬ ಪರ್ಸೆಂಟ್ ನಂಬರ್ ಬಂದಿದ್ದರೂ ಸಹ ಸೀಟ್ ಸಿಗುತ್ತಿಲ್ಲವೆಂದು ದಿನ ಬೆಳಗಾದರೆ ನೂರಾರು ಜನ ವಿದ್ಯಾರ್ಥಿಗಳು ನಮಗೆ ಬಂದು ದೂರು ಕೊಡುತ್ತಿದ್ದಾರೆ. ಇದಕ್ಕೆ ಒಂದೇ ಒಂದು ಉದಾಹರಣೆ ಕೊಡುತ್ತೇನೆ. ನನ್ನ ಕ್ಷೇತ್ರಕ್ಕೆ ಸೇರಿದ ಸಂಪಂಗಿರಾಮನಗರದಲ್ಲಿ ಒಂದು ಉರ್ದು ಶಾಲೆ ಇದೆ. ಅಲ್ಲಿ ೧೫೦ ಮಕ್ಕಳು ಕಲಿಯುತ್ತಿದ್ದಾರೆ. ಆದರೆ ಅಲ್ಲಿ ಸರಿಯಾದ ಕಟ್ಟಡವಿಲ್ಲ. ೧೦

ಆಡಿ ಉದ್ದ ೧೦ ಆಡಿ ಅಗಲದ ಒಂದು ಕೋಣೆಯಲ್ಲಿ ಆ ಶಾಲೆಯನ್ನು ನಡೆಸುತ್ತಿದ್ದಾರೆ. ಕಳೆದ ೬ ವರ್ಷಗಳಿಂದ ಈ ಬಗ್ಗೆ ಮನವಿ ಮಾಡಿಕೊಂಡರೂ ಸಹ ಅದಕ್ಕೆ ಸೂಕ್ತ ಪರಿಹಾರವನ್ನು ಕೊಡುವುದಕ್ಕೆ ನಿಮ್ಮಿಂದ ಆಗುತ್ತಿಲ್ಲ. ರಾಮನಗರದಲ್ಲಿ ೬ ಉರ್ದು ನರ್ಸರಿ ಶಾಲೆಗಳನ್ನು ಖಾಸಗಿಯವರು ಪುಕಸಟ್ಟೆಯಾಗಿ ನಡೆಸುತ್ತಿದ್ದಾರೆ. ಇಂತಹ ಶಾಲೆಗಳಿಗೆ ಗ್ರ್ಯಾಂಟ್ ಕೊಡಬೇಕೆಂದು ಅವರು ಕೇಳಿಕೊಂಡರೂ ಸಹ ಅದನ್ನು ಕೊಡುವುದಕ್ಕೆ ನಿಮಗೆ ಯೋಗ್ಯತೆ ಇಲ್ಲ. ನಿಮ್ಮ ಅಧಿಕಾರಿಗಳು ಕೊಟ್ಟ ಸ್ಟೇಟ್‌ಮೆಂಟನ್ನು ಇಲ್ಲಿ ತಂದು ಓದುತ್ತೀರಿ. ನಿಮ್ಮ ಸ್ವಂತ ಅಭಿಪ್ರಾಯದಿಂದ ಇಲ್ಲಿ ಏನನ್ನೂ ತಾವು ಹೇಳುತ್ತಿಲ್ಲ. ಇದರಿಂದ ನಿಮ್ಮ ಅಧಿಕಾರಿಗಳು ನಿಮಗೆ ಯಾವ ರೀತಿ ಬೇಕೋ ಆ ರೀತಿ ತಿರುಗಿಸುತ್ತಾರೆ. ಜಾಯಿಂಟ್ ಡೈರೆಕ್ಟರ್ ಅವರನ್ನು ನೋಡಬೇಕೆಂದು ಕಳೆದ ೬ ದಿವಸಗಳಿಂದ ಕಾಯುತ್ತಿದ್ದೇನೆ, ಆದರೆ ಅವರು ನನಗೆ ಸಿಕ್ಕಲ್ಲ; ನಾನು ಹೋಗಿ ಕೇಳಿದಾಗಲೆಲ್ಲಾ, ಅವರು ಸಾಹೇಬರ ಹತ್ತಿರ ಹೋಗಿದ್ದಾರೆ, ಕಮೀಷನರ್ ಅವರ ಹತ್ತಿರ ಹೋಗಿದ್ದಾರೆ, ಸೆಕ್ರೆಟೇರಿಯಟ್‌ಗೆ ಹೋಗಿದ್ದಾರೆ, ಆಮ್ಮಾವರ ಹತ್ತಿರ ಹೋಗಿದ್ದಾರೆಂದು ಹೇಳುತ್ತಾರೆ ಹೀಗಾಗಿ ನನಗೆ ಅವರಿಂದ ಕಳೆದ ೬ ದಿವಸಗಳಿಂದ ಉತ್ತರ ಸಿಕ್ಕಿಲ್ಲ. ಇವತ್ತಿನ ದಿವಸ ಸೂರಾರು ಜನ ಮಕ್ಕಳಿಗೆ ಆಡ್ಮಿಷನ್ ಸಿಕ್ಕಿಲ್ಲ. ಇವತ್ತು ಆ ಮಕ್ಕಳಿಗೆ ಆಡ್ಮಿಷನ್ ಕೊಡಿಸಿಕೊಡಬೇಕು. ಇವತ್ತಿನ ದಿವಸ ಸರ್ಕಾರ ಸೆಕೆಂಡರಿ ವಿದ್ಯಾಭ್ಯಾಸದವರೆಗೆ ಫ್ರೀ ಎಜುಕೇಷನ್ ಕೊಡಲು ಹೊಣೆ ಹೊತ್ತಿದೆ. ನಮ್ಮ ಕ್ಷೇತ್ರದಲ್ಲಿ ಮಕ್ಕಳಿಗೆ ಆಡ್ಮಿಷನ್ ಕೊಡುವ ತನಕ ನಾವು ಬಿಟ್ಟುಕೊಡುವುದಿಲ್ಲ, ನಾವು ಯಾವ ಮಟ್ಟಕ್ಕೆ ಬೇಕಾದರೂ ಹೋಗುವುದಕ್ಕೆ ತಯಾರಾಗಿದ್ದೇವೆ. ಒಂದು ನರ್ಸರಿ ಶಾಲೆಗೆ ೫೫,೦೦೦ ರೂಪಾಯಿ ಡೊನೇಷನ್ ಕೊಟ್ಟಿದ್ದಾರೆ. ಆ ಇನ್‌ಸ್ಟಿಟ್ಯೂಟನ್ನು ಕೋಟ್‌ಮಾಡಿ ನಾನು ಜಾಯಿಂಟ್ ಡೈರೆಕ್ಟರ್‌ರವರಿಗೆ ಪತ್ರ ಬರೆದಿದ್ದೇನೆ. ಆದರೆ ಇದುವರೆಗೂ ನನಗೆ ಉತ್ತರ ಬರಲಿಲ್ಲ. ಇವತ್ತಿನ ದಿವಸ ಅಧಿಕಾರಿಗಳಿಗೆ ಅರ್ಜೆನ್ಸಿ ಇಲ್ಲದೇ ಇರುವುದರಿಂದ, ಯೋಗ್ಯತೆ ಇಲ್ಲದೇ ಇರುವುದರಿಂದ ಶಾಲೆಗಳು ಈ ಮಟ್ಟಕ್ಕೆ ಬಂದಿವೆ.

MR. SPEAKER.—I do not want the hon. Members to make any statement here. They can seek clarification on the points only.

ಶ್ರೀ ಸಿ. ಬಿ. ಇಬ್ರಾಹಿಂ.—ಅವರು ಕೊಟ್ಟಿಂಥ ಸ್ಪಷ್ಟೀಕರಣ ಸಮರ್ಪಕವಾಗಿಲ್ಲ, ಆದುದರಿಂದ ನಾನು ಸ್ಪಷ್ಟೀಕರಿಸಬೇಕಾಗುತ್ತದೆ.

MR. SPEAKER.—You are not the person to do it. I don't permit you.

ಶ್ರೀ ಎಸ್. ಆರ್. ಬೊಮ್ಮಾಯಿ.—ಮಾನ್ಯ ಸ್ನೇಹಿತರು ಸ್ಪಷ್ಟೀಕರಣ ಕೇಳುತ್ತೇನೆ ಎಂದು ಹೇಳಿದರು.

ಶ್ರೀ ಬಿ. ಭಾಸ್ಕರ ಶೆಟ್ಟಿ.—ಮಾನ್ಯ ಸದಸ್ಯರು ಅರ್ಹತೆ ಇಲ್ಲ ಎಂದು ಹೇಳಲಿ, ಆದರೆ ಯೋಗ್ಯತೆ ಇಲ್ಲ ಎಂದು ಹೇಳಿದರು, ಇದು ಅನ್‌ಪಾರ್ಲಿಮೆಂಟ್ ಆಗುತ್ತದೆ,

ಶ್ರೀ ಸಿ. ಬಿ. ಇಬ್ರಾಹಿಂ.—ನಾನು ಅಧಿಕಾರಿಗಳ ಬಗ್ಗೆ ಹೇಳುತ್ತಿದ್ದೇನೆ. ನನ್ನ ಕಾನ್‌ಸ್ಟಿಟ್ಯೂಯೆನ್ಸಿಯಲ್ಲಿ ೭೦ ಪರ್ಸೆಂಟ್ ತೆಗೆದುಕೊಂಡಿರತಕ್ಕ ಹುಡುಗರಿಗೆ ಆಡ್ಮಿಷನ್ ಸಿಕ್ಕಿಲ್ಲ. ನೀವು ಅಧಿಕಾರಿಗಳ ಪರವಾಗಿ ಮಾತನಾಡುತ್ತಿದ್ದೀರಿ.

ಅಧ್ಯಕ್ಷರು.—ಮಾನ್ಯ ಸದಸ್ಯರು ಉದ್ರೇಕದಿಂದ ಮಾತನಾಡಬಾರದು. ಸಂಯಮದಿಂದ ಇರಬೇಕು.

ಶ್ರೀ ಎಚ್. ಡಿ. ದೇವೇಗೌಡ.—ಉದ್ರೇಕದ ಪ್ರಶ್ನೆಯಲ್ಲ. ಪ್ರತಿವರ್ಷ ಮಕ್ಕಳ ಪ್ರವೇಶಕ್ಕೆ ಆಗತಕ್ಕೆ ತೊಂದರೆ ಬಗ್ಗೆ ಈ ಸದನದಲ್ಲಿ ಚರ್ಚೆಯಾಗುತ್ತಾ ಇದೆ. ಸರ್ಕಾರ ಮುಂದಾಲೋಚನೆಮಾಡಿ, ವರ್ಷಕ್ಕೆ ಎಷ್ಟು ಜನ ಹುಡುಗರು ತೇರ್ಗಡೆಯಾಗುತ್ತಾರೆ, ಅದಕ್ಕೆ ನಾವು ಏನು ವ್ಯವಸ್ಥೆಮಾಡಬೇಕು ಎಂದು ಪ್ಲಾನಿಂಗ್ ಮಾಡಿಲ್ಲ ಎಂದರೆ ನಾವು ಎಷ್ಟು ಸಲ ಹೇಳಬೇಕು? ೭೦-೭೫ ಪರ್ಸೆಂಟ್ ತೆಗೆದುಕೊಳ್ಳಬೇಕಾದರೆ ಹುಡುಗರಿಗೆ ಎಷ್ಟು ಕಷ್ಟವಾಗುತ್ತದೆ, ಅಂಥಾದ್ದರಲ್ಲಿ ಅವರಿಗೆ ಪ್ರವೇಶ ಇಲ್ಲ ಎಂದರೆ ಏನು ಮಾಡಬೇಕು. ಪ್ರತಿವರ್ಷ ಬಜೆಟ್ ಸೆಷನ್‌ನಲ್ಲಿ ಇದರ ಬಗ್ಗೆ ಚರ್ಚೆ ನಡೆದಿದೆ. ಇದಕ್ಕೆ ಏನಾದರೂ ಪರಿಹಾರ ಹುಡುಕಲಿಕ್ಕೆ ಸಾಧ್ಯವಾಗಿಲ್ಲವೇ. ಸರ್ಕಾರಕ್ಕೆ ತಪ್ಪಿದ್ದಾರೆ, ಅವರ ನಿರಪಿನಿಂದ ಸರ್ಕಾರ ಮನಸ್ಸು ಮಾಡಿದರೆ ಮಾಡಬಹುದು. ಪ್ರತಿ ದಿನ ನಮ್ಮ ಮನೆ ಬಾಗಿಲಲ್ಲಿ ಹುಡುಗರು ಬಂದು ನಿಂತಿರುತ್ತಾರೆ. ಸದಸ್ಯರುಗಳು ಉದ್ರೇಕವಾಗುತ್ತಿದ್ದಾರೆ ಎಂದು ತಾವು ಹೇಳುತ್ತಿದ್ದೀರಿ.

ಅಧ್ಯಕ್ಷರು.—ಸದಸ್ಯರು ಭಾವಪರವಶವಾಗಬಾರದು, ಉದ್ರೇಕವಾಗಬಾರದು, ಸಂಯಮದಿಂದ ಇರಬೇಕು. ಏಕೆಂದರೆ, He is a Legislator. We have to establish good principles and tradition.

ಶ್ರೀ ಎಚ್. ಡಿ. ದೇವೇಗೌಡ.—ಆನೆಗೆ ಅಂಕುಶ ಇದ್ದರೆ ಒಂದೊಂದು ಸಾರಿ ಕೆಲಸ ಮಾಡುತ್ತದೆ. ಆದೇರೀತಿ ಅಂಕುಶ ಬೇಕು.

ಶ್ರೀ ಬಿ. ಸುಬ್ಬಯ್ಯ ಶೆಟ್ಟಿ.—ಮಾನ್ಯ ಸದಸ್ಯರಾದ ಇಬ್ರಾಹಿಂರವರು ಶಾಂತರೀತಿಯಿಂದ ಹೇಳಿದರು, ಉದ್ರೇಕವಾದ ರೀತಿಯಲ್ಲಿ ಹೇಳಿದರು.

ಶ್ರೀ ಮಳ್ಳೂರು ಆನಂದರಾವ್.—ಯಾವ ರೀತಿಯಲ್ಲಿ ಹೇಳಿದರೂ ನಿಮ್ಮ ಮೇಲೆ ಪರಿಣಾಮವಾಗುವುದಿಲ್ಲ.

ಶ್ರೀ ಬಿ. ಸುಬ್ಬಯ್ಯ ಶೆಟ್ಟಿ.—ನಮ್ಮ ಮೇಲೆ ಪರಿಣಾಮವಾಗುತ್ತದೆ. ಆದರೆ ನಿಮ್ಮ ಹೆಲ್ತಿನ ಮೇಲೆ ಎಲ್ಲಿ ಪರಿಣಾಮವಾಗುತ್ತದೋ ಎಂದು ನನಗೆ ಶಂಕೆ. He is a friend of mine. I am worried about his health. ಮಾನ್ಯ ಸದಸ್ಯರು ಹೇಳಿದ ವಿಷಯ ಏನಿದೆ ಅದನ್ನು ನೋಡಿದಾಗ ಅದು ಬಹಳ ಗಂಭೀರವಾದ ವಿಷಯ. ಉದ್ವೇಗ ಬರುವಂಥ ವಿಷಯ. ಇದರಲ್ಲಿ ಯಾರೂ ಎರಡು ಮಾತನ್ನು ಹೇಳುವಹಾಗಿಲ್ಲ. ಈ ಸೀಟುಗಳ ವಿಚಾರದಲ್ಲಿ ಈಗ ಮಾನ್ಯ ಸದಸ್ಯರು ಮಾತನಾಡಿದ್ದು ಏನಿದೆ, ಮೂಲತಃ ಇದರ ಒಗ್ಗೆ ನಾನು ಮೊನ್ನೆ ಕೆಲವು ಕಡೆ ಹೇಳಿದೆ. ಪಾಪುಲೇಷನ್ ಎಕ್ಸ್‌ಪ್ಲೋಷನ್ ಶುರು ತಿಳಿಯುವಂಥಾದ್ದು ಸಮಾಜದಲ್ಲಿ ಈ ಶಾಲೆಗಳಿಂದ. ಅದನ್ನು ಈಗ ನಾವು ಕಾಣುತ್ತಿದ್ದೇವೆ. ಈಗಾಗಲೇ ವಿದ್ಯಾಭ್ಯಾಸಕ್ಕಾಗಿ ನಾವು ಸುಮಾರು ೧೩೦, ೧೪೦ ಕೋಟಿ ರೂಪಾಯಿಗಳನ್ನು ಖರ್ಚುಮಾಡುತ್ತಿದ್ದೇವೆ. I also consider that it is not an accusation. You are putting forward the difficulties of the society, about which all the members will have to think seriously. How much can be spent on this if the population explosion goes on like this? That is the thing which we have to tackle first. ನಾನು ಮೊನ್ನೆ ಹೋಗಿ ಕೆಲವು ಶಾಲೆಗಳನ್ನು ನೋಡಿದೆ. ಒಂದು ಶಾಲೆಯಲ್ಲಿ ಎಂದು ರೂಮು ಇತ್ತು, ೧೦-೨೦ ವರ್ಷಗಳ ಹಿಂದೆ ೬೦ ಜನ ಮಕ್ಕಳಿಗೆ ಕಟ್ಟಿದಂಥ ಶಾಲೆ, ಅದರಲ್ಲಿ ಈಗ ೨೫೦ ಮಕ್ಕಳಿಗೆ ಪಾಠವನ್ನು ಕಲಿಸುತ್ತಿದ್ದಾರೆ ಎಂದು ತಿಳಿಸಿದರು. I was really shocked. ಯಾವ ರೀತಿಯಿಂದ ಇದರಲ್ಲಿ ಕಲಿಸುತ್ತಿದ್ದಾರೆ. We have to clear up the back-log ಬಹುಶಃ ೬೦ ಜನ ಮಕ್ಕಳಿಗೆ ಕಟ್ಟಿದ್ದ ಇರಬಹುದು, ೯೦ ಜನ ಹುಡುಗರು ಆಗುವಾಗ ಆಲೋಚನೆ ಮಾಡಿದ್ದರೆ ಸ್ವಲ್ಪ ಸೌಲಭ್ಯವಾಗುತ್ತಿತ್ತು. ಈಗ ೨೫೦ ಜನ ಮಕ್ಕಳು ಆದಾಗ ಆಲೋಚನೆ ಮಾಡಬೇಕಾದ ಪ್ರಸಂಗ ಬಂದಿದೆ. And also, it is a question of providing funds for giving proper accommodation. ಇಷ್ಟು ದೊಡ್ಡ ಫಂಡ್ ನಮ್ಮಲ್ಲಿ ಇಲ್ಲ. ಆದರೂ ಹೊಡ I am at it. ಇದಕ್ಕೆ ಏನಾದರೂ ಒಂದು ವ್ಯವಸ್ಥೆ ಮಾಡಬೇಕು ಎನ್ನುವ ಪ್ರಯತ್ನದಲ್ಲಿ ನಾನಾದರೂ ಇದ್ದೇನೆ. ಆದರೆ, ಇಷ್ಟು ದೊಡ್ಡ ಫಂಡ್ ನಮ್ಮ ಹತ್ತಿರ ಇಲ್ಲ. I am taking you into confidence in this matter. ಪ್ರತಿ ವರ್ಷ ಮಕ್ಕಳ ಸಂಖ್ಯೆ ಏರುತ್ತಾ ಹೋಗುತ್ತಿದೆ. ಅದೆ ಆಕಾಮಡೇಷನ್ ಪ್ರೊವೈಡ್ ಮಾಡಿಲ್ಲ. ೬೦ ಮಕ್ಕಳು ಇರತಕ್ಕ ಶಾಲೆಯಲ್ಲಿ ಇವತ್ತು ೨೫೦ ಮಕ್ಕಳು ಇದ್ದಾರೆ, ಇದನ್ನು ಸರಿಪಡಿಸಬೇಕು. ಮಾನ್ಯ ಸದಸ್ಯರಾದ ಶಾಮಣ್ಣನವರು ಸರ್ಕಾರಿ ಶಾಲೆಗಳ ಗುಣಮಟ್ಟ ಉತ್ತಮವಾಗಬೇಕು ಎಂದು ಹೇಳಿದ್ದಾರೆ. ಇದು ಅತ್ಯವಶ್ಯಕವಾದ ಸಂಗತಿ. ಸರ್ಕಾರ ಇದರ ಬಗ್ಗೆ ಗಂಭೀರವಾಗಿ ಆಲೋಚನೆಮಾಡಿ, ಸರ್ಕಾರಿ ಶಾಲೆಗಳನ್ನು ಇಂಪ್ರೂವ್ ಮಾಡಬೇಕು ಎನ್ನುವ ಕಾರ್ಯಕ್ರಮವನ್ನು ಹಾಕಿಕೊಂಡಿದೆ.

SRI A. LAKSHMISAGAR.—Once again the same rigmarole is doled out to the members of this House. I wanted the Minister to let us know the steps he is proposing to take immediately to solve the serious problem of admission of students into the Colleges and Schools.

Sir, he gave an explanation that population explosion is one factor which has thrown the Department out of gear. I would like to know from him, whether the department was not aware of the fact i.e., the rate of growth of population in this country or in this State ? In conformity with such growth, every year or every five years or every ten years, steps must have been taken for providing minimum educational facilities as laid down in the Constitution to the students. There is no point in telling us that there is no population explosion. Has there been any plan to expand Education to be in conformity with the increase in population ? There is no point in telling that there is population explosion and we are not in a position to adjust ourselves to the needs of the community. Whose responsibility it is ?

11-00 A. M.

SRI B. SUBBAIAH SHETTY.—I only told the magnitude of the problem and not that we cannot meet it. We have got a plan to meet it and we will meet it. Regarding primary and secondary education, we will definitely meet it. I wanted to impress upon the Hon'ble Members the magnitude of the problem and I think I have been misunderstood or rather I have been misquoted. The Hon'ble Member says that I have been putting the population explosion as an excuse. It is not an excuse. It is a hard fact. We have to face it. If I say that there is no population explosion, then it will be far from truth. There is population explosion but what I am telling is it is a factor which we have to reckon with and I am only trying to impress upon the gravity of the problem.

SRI A. LAKSMI SAGAR.—But what has been done ? Your first promise is alright, The same party is in Office and you know the growth rate of population. You knew the increase in demand of the admission of boys and girls in schools and colleges every year. In conformity with that increase, have you made provision year after year for getting the new-comers into the schools and colleges ? If such an attempt has been made, then our problem would have been met to a great extent if not full extent. This is point number 1. Then my second point is one of the reasons for rush into the private aided and unaided schools is that they are having English as the medium of instruction.

ಅಧ್ಯಕ್ಷರು. ವಿವರವಾಗಿ ಮಾತನಾಡುವುದಕ್ಕೆ ಹೋಗಬೇಡಿ, ಒಂದೆರಡು ಸ್ಪಷ್ಟೀಕರಣ ಇದ್ದರೆ ಕೇಳಿ ಆ ಮೇಲೆ ಜೀರೋ ಅವರ್ ಮೇಲೆ ಮಾತನಾಡುವಿರಂತೆ.

ಶ್ರೀ ಎ. ಲಕ್ಷ್ಮೀ ಸಾಗರ್ —ಕಾಲೇಜ್, ಸ್ಕೂಲ್‌ಗಳಲ್ಲಿ ವಿದ್ಯಾರ್ಥಿಗಳಿಗೆ ಪ್ರಶ್ನೆಗಳನ್ನು ಕೇಳಿರು ತ್ತೇವೆ ಆದಕ್ಕೆ ಅವರು 'ಎಸ್' ಆರ್ 'ನೋ' — ಎಂದು ಉತ್ತರ ಬರೆಯಬೇಕು. ಹಾಗೆ ನಮಗೆ ಇಲ್ಲಿ ಮಂತ್ರಿಗಳಿಂದ ನಮಗೆ ಸಮಂಜಸವಾದ ಉತ್ತರ ಬರದಿದ್ದರೆ ಪೂರ್ವಭಾವಿಯಾಗಿ ನಾಳ್ಕೈದು

ಮಾತುಗಳನ್ನು ಸೇರಿಸಿ ಆ ಮೇಲೆ ವಿವರಣೆಗಳನ್ನು ಪಡೆಯುವುದು ಉತ್ತಮವೆಂದು ನನಗನ್ನಿಸುತ್ತದೆ. ನಾನು ಉಪಾಧ್ಯಾಯನಾಗಿದ್ದವನು, ಈಗಲೂ ಉಪಾಧ್ಯಾಯನಾಗಿದ್ದೇನೆ. ಬರೀ ಪ್ರಶ್ನೆಗೆ ಹುಡುಗರು ಎಸ್ ಆರ್ ನೋ ಎಂದು ಬರೆದ ಹಾಗೆ ಹೇಳಿದರೆ ಪ್ರಯೋಜನವಿಲ್ಲ. English medium is one attracting factor which is drawing large number of boys and girls into the private educational institutions. Another factor which my friend Sri Shamanna has mentioned is that the private institutions are more efficient and better performance they have. But I should like to know from the Hon'ble Minister what steps the Department of Public Instruction has been taking during the last quarter of a century to improve the standard of education in Government schools either in Bangalore City or elsewhere ?

MR. SPEAKER.—That point has been asked by Sri Mallur Ananda Rao.

ಶ್ರೀ ಎ. ಲಕ್ಷ್ಮೀ ಸಾಗರ್.—ಅವರು ಕೇಳಿದ್ದಾರೆ ಸರಿ. ಆದರೆ ನಮ್ಮ ಇಲಾಖೆಯವರು ಗುಣ ಮಟ್ಟವನ್ನು ಉತ್ತಮ ಪಡಿಸುವುದಕ್ಕೆ ೧೨-೧೫ ವರ್ಷಗಳಿಂದ ಏನು ಕ್ರಮ ತೆಗೆದುಕೊಂಡಿದ್ದಾರೆ ? ಸರ್ಕಾರಿ ಶಾಲೆಗಳಲ್ಲಿ ವಿದ್ಯಾರ್ಥಿಗಳ ಗುಣ ಮಟ್ಟ ಹೆಚ್ಚುವುದಕ್ಕೆ ಏನೂ ಕ್ರಮ ತೆಗೆದುಕೊಂಡಿಲ್ಲ. ನಮ್ಮ ಇಲಾಖೆಯವರು ಬರೀ ಟೀಚರ್ಸ್‌ಗಳನ್ನು ಟ್ರಾನ್ಸ್‌ಫರ್ ಮಾಡುವದರಲ್ಲಿ, ಹಣ ವಸೂಲಿ ಮಾಡುವುದರಲ್ಲಿಯೇ ನಿರತರಾಗಿದ್ದಾರೆಯೇ ಹೊರತು ಏನೂ ಕೆಲಸ ಮಾಡಿಲ್ಲ.

ಅಧ್ಯಕ್ಷರು.—ಗಮನ ಸೆಳೆಯುವ ಸೂಚನೆಯ ಮೇಲೆ ಅದನ್ನೆಲ್ಲಾ ಮಾತನಾಡುವುದಕ್ಕೆ ಅಷ್ಟೊಂದು ಅವಕಾಶ ಇಲ್ಲ. ಆದುದರಿಂದ ಆದಷ್ಟು ವಿಷಯಕ್ಕೆ ಸಂಬಂಧಪಟ್ಟ ಹಾಗೆ ಕೇಳಿ.

ಶ್ರೀ ಎ. ಲಕ್ಷ್ಮೀ ಸಾಗರ್.—ನಿಮ್ಮ ಇಲಾಖೆಯವರು ಇದರ ಬಗ್ಗೆ ಏನು ಕೆಲಸ ಕಾರ್ಯಗಳನ್ನು ಮಾಡಿದ್ದಾರೆ ಎಂಬುವ ವಿವರಣೆಯನ್ನು ತಾವು ನೀಡಬೇಕು. I can be in conformity with Rule 312provided the response is also and equally convincing and purposeful If we expects answers from the Hon'ble Minister in as vague a manner as it is, we have got to insist and go beyond the rules or twist the language.

MR. SPEAKER.—I don't allow the Hon'ble Member to go beyond the Rules. I am here to follow the rules and regulations.

ಶ್ರೀ ಎಸ್. ಆರ್. ಬೊಮ್ಮಾಯಿ.—ಕೇಳಿದ ಪ್ರಶ್ನೆಗೆ ಪರಿಹಾರವೇನಿದೆ ಎಂಬುದನ್ನು ಸರ್ಕಾರದವರು ಸ್ಪಷ್ಟವಾಗಿ ಹೇಳಿಬಿಟ್ಟಿದ್ದರೆ ಇಷ್ಟೆಲ್ಲಾ ಮಾತುಕತೆ ನಡೆಯುತ್ತಿರಲಿಲ್ಲ. ಬೆಂಗಳೂರು ಮುಂತಾದ ಕಡೆಗಳಲ್ಲಿ ವಿದ್ಯಾರ್ಥಿಗಳಿಗೆ ಪ್ರವೇಶವೇ ಸಿಗುತ್ತಿಲ್ಲ. ೭೦-೮೦ ಪರ್ಸೆಂಟ್ ಮಾರ್ಕ್ಸ್ ಬಂದಿರುವವರೇ ಕ್ಯೂ ನಿಂತಿದ್ದಾರೆ, ಬಾಕಿಯವರ ಗತಿಏನು ? ಇದರ ಬಗ್ಗೆ ತಾವು ಸರಿಯಾದ ಉತ್ತರವನ್ನು ಕೊಡದೇ ಬರೀ ತತ್ವಜ್ಞಾನವನ್ನು ಹೇಳಿದರೆ ಏನು ಪ್ರಯೋಜನ? Immediate action should be taken to see that boys and girls are admitted to schools and eolleges. ನಮಗೆ ತತ್ವಜ್ಞಾನ ಬೇಕಾಗಿಲ್ಲ. ಬೆಂಗಳೂರು ಮುಂತಾದ ನಗರಗಳಲ್ಲಿ ವಿದ್ಯಾರ್ಥಿಗಳಿಗೆ ಸ್ಕೂಲ್‌ಗಳಿಗೆ, ಕಾಲೇಜ್‌ಗಳಿಗೆ ಸೇರಲು ಪ್ರವೇಶ ಸಿಗುತ್ತಿಲ್ಲ ಅದಕ್ಕೆ ತಾವು ಏನು ಕ್ರಮ ತೆಗೆದುಕೊಂಡಿದ್ದೀರಿ ಎಂಬುದನ್ನು ತಿಳಿಸಿದರೆ ಸಾಕು.

ಶ್ರೀ ಎ. ಲಕ್ಷ್ಮೀ ಸಾಗರ್.—ಇಂಜಿನಿಯರಿಂಗ್ ಕಾಲೇಜ್‌ಗಳಲ್ಲಿ ಸೀಟ್‌ಗಳನ್ನು ಹಂಚಲು ಒಂದು ಪೂಲ್ ಮಾಡಿದ್ದಾರೆ ಆದೇರೀತಿ ಹೈಸ್ಕೂಲ್ ಕಾಲೇಜ್‌ಗಳಿಗೆ ವಿದ್ಯಾರ್ಥಿಗಳು ಸೇರಲು ಏನಾದರೂ ಒಂದು ಪೂಲ್ ಮಾಡಿ ಅವರು ಮುಂದಿನ ವಿದ್ಯಾಭ್ಯಾಸ ಮುಂದುವರಿಸಲು ಏನಾದರೂ ಒಂದು ವ್ಯವಸ್ಥೆ ಮಾಡಿದ್ದೀರಾ ಎಂದು ಕೇಳಲು ಬಯಸುತ್ತೇನೆ The Mallaradhya Committee made a recommendation after having gone into this problem and suggested

the Model Education Act as far back as 1974. The recommendations are put in the cold storage. The same party has been in power for the last six years. What action has been taken on the recommendations of that Committee ? If no action has been taken, why the Government failed to take action ? The Hon'ble Minister may kindly answer these questions.

ಶ್ರೀ ಪಿ. ರಾಮದೇವ್.—ಸನ್ಮಾನ್ಯ ಅಧ್ಯಕ್ಷರೇ, ಪಾಪ್ಯುಲೇಷನ್ ಎಕ್ಸ್‌ಪ್ಲಾನ್‌ಷನ್ ಬಗ್ಗೆ ಹೇಳುವುದಾದರೆ ಬೆಂಗಳೂರಿನ ಪಾಪ್ಯುಲೇಷನ್ ಗ್ರೋತ್ ಆಟ್ ದಿ ರೇಟ್ ಆಫ್ ೩.೨ ಪರ್ಸೆಂಟ್ ಇದೆ. ಅದು ತಾವೇ ಕೊಟ್ಟಿರತಕ್ಕಂಥ ಪುಸ್ತಕದಲ್ಲಿದೆ. ಆದುದರಿಂದ ತಾವು ಇದರ ಬಗ್ಗೆ ಪ್ಲಾನ್ ಮಾಡಬೇಕಾಗಿತ್ತು ಆ ರೀತಿ ಪ್ಲಾನ್ ಏತಕ್ಕೆ ಮಾಡಲಿಲ್ಲ ಎನ್ನತಕ್ಕಂಥಾದ್ದನ್ನು ನಾವು ಕೇಳಬೇಕಾಗಿದೆ. ಇವತ್ತು, ತಮ್ಮ ಮುಖಾಂತರ ಮಾನ್ಯ ಮಂತ್ರಿಗಳವರಲ್ಲಿ ಒಂದು ವಿಷಯವನ್ನು ಗಮನಕ್ಕೆ ತರಬೇಕಾಗಿರುವುದು ಏನೆಂದರೆ ೭೦-೮೦ ಪರ್ಸೆಂಟ್ ಬಂದಿರತಕ್ಕಂಥ ವಿದ್ಯಾರ್ಥಿಗಳಿಗೇ ಕಾಲೇಜ್‌ನಲ್ಲಿ ಸೀಟ್ ಸಿಗದಿರುವಾಗ ಆರ್ಡಿನರಿಯಲ್ಲಿ ಪಾಸ್ ಆಗಿರತಕ್ಕಂಥವರಿಗೆ ತಾವು ಯಾವ ಸೌಲಭ್ಯವನ್ನು ಒದಗಿಸಿಕೊಟ್ಟಿದ್ದೀರಿ ಎಂದು ಕೇಳಬೇಕಾಗಿದೆ. ಇದನ್ನು ಪತ್ರಿಕೆಗಳವರ ಮುಖಾಂತರವೂ ತಮ್ಮ ಗಮನಕ್ಕೆ ತರಲಾಗಿದೆ ಇದು ಬಹಳ ಗಂಭೀರ ಸಮಸ್ಯೆ ಆಗಿದೆ. ಆದಾಗ್ಯೂ ಮಾನ್ಯ ವ ಮಂತ್ರಿಗಳವರು ಇದರ ಕಡೆಗೆ ಗಮನವನ್ನು ಹರಿಸಿಲ್ಲವೆಂದು ಬಹಳ ವಿಷಾದದಿಂದ ಹೇಳುತ್ತೇನೆ ಪ್ರತಿ ವರ್ಷ ನರ್ಸರಿಯಿಂದ ಪಿಡಿದು ಕಾಲೇಜ್ ವರೆಗಿನ ವಿದ್ಯಾರ್ಥಿ ವಿದ್ಯಾರ್ಥಿನಿಯರು ಮತ್ತು ಪೋಷಕರು ಇದರ ಬಗ್ಗೆ ಚಳುವಳಿಯನ್ನು ನಡೆಸುತ್ತಲೇ ಇದ್ದಾರೆ. ಇನ್ನು ೧ ಸಾವಿರ ೨ ಸಾವಿರದ ರೂಪಾಯಿಗಳವರೆಗೆ ಡೊನೇಷನ್‌ಗಳನ್ನು ನರ್ಸರಿಯಿಂದ ಪಿಡಿದು ಕಾಲೇಜ್‌ವರೆಗೂ ತೆಗೆದುಕೊಳ್ಳುತ್ತಿದ್ದಾರೆ ಇದನ್ನು ತಾವು ತಪ್ಪಿಸಬೇಕು, ತಪ್ಪಿಸಬೇಕಾದರೆ ನೀವು ಎಲ್ಲಾ ಶಾಲಾ ಕಾಲೇಜ್‌ಗಳವರನ್ನೂ ಕರೆದು ಇದರ ಬಗ್ಗೆ ಮಾತನಾಡಬೇಕು. ಬೆಂಗಳೂರು ನಗರದಲ್ಲಿ ಪ್ರತಿಯೊಬ್ಬ ವಿದ್ಯಾರ್ಥಿಗೂ ಸೀಟ್ ದೊರಕಿಸಿ ಕೊಡುತ್ತೇವೆ ಎನ್ನತಕ್ಕ ಭರವಸೆಯನ್ನು ಇವತ್ತು ತಾವು ನಮಗೆ ಕೊಡ ಬೇಕಾಗಿದೆ.

ವಿದ್ಯಾರ್ಥಿಗಳು ಸೀಟು ಕೇಳಿರತಕ್ಕಂಥಾದ್ದಕ್ಕೆ ಮಾನ್ಯ ಮಂತ್ರಿಗಳು ಭರವಸೆ ಕೊಡುತ್ತಾರೆಯೇ ಎಂದು ಕೇಳಬೇಕಾಗಿದೆ. ನಿಜವಾಗಿಯೂ ಎಜುಕೇಶನ್ ಡಿಪಾರ್ಟ್‌ಮೆಂಟ್ ಸತ್ತು ಹೋಗಿದೆಯೇ ? ಅದು ನಿಜವಾಗಿಯೂ ಜೀವಸಹಿತವಿದ್ದಿದ್ದರೆ ಇಷ್ಟು ರಾದ್ಧಾಂತವಾಗುತ್ತಾ ಇರಲಿಲ್ಲ.

ಅಧ್ಯಕ್ಷರು.—ತಾವು ಮಾನ್ಯ ಮಂತ್ರಿಗಳು ಸ್ಟೇಟ್‌ಮೆಂಟ್ ಮಾಡಿದ್ದಾರೆ ಆ ವಿಚಾರದಲ್ಲಿ ಸೃಷ್ಟೀಕರಣ ಕೇಳಿ ಅದನ್ನು ಬಿಟ್ಟು ನೀವೇ ಭಾಷಣ ಮಾಡುವ ರೀತಿಯಲ್ಲಿ ಮಾತನಾಡಿದರೆ ಹೇಗೆ ?

ಶ್ರೀ ಪಿ. ರಾಮದೇವ್.—ವಿದ್ಯಾಮಂತ್ರಿಗಳನ್ನು ನಾನು ಕೇಳುವುದು ಇಷ್ಟೆ ಈಗ ಏನು ವಿದ್ಯಾರ್ಥಿಗಳು ಸೀಟುಗಳನ್ನು ಬಯಸಿ ಬಂದಿದ್ದಾರೆ ಅವರಿಗೆಲ್ಲಾ ಸೀಟುಗಳನ್ನು ಕೊಡುವ ಭರವಸೆಯನ್ನು ಕೊಡುತ್ತಾರೆಯೇ ಎಂದು ಕೇಳುತ್ತೇನೆ.

ಶ್ರೀಮತಿ ಎಸ್. ಪ್ರಮಿಳಾ.—ಸ್ವಾಮಿ ಈ ಗಂಡಾಂತರವಾದ ಪರಿಣಾಮವನ್ನು ಇವತ್ತು ಮಾಡಿರತಕ್ಕಂಥಾದ್ದು ಡೊನೇಷನ್ ತೆಗೆದುಕೊಳ್ಳುವುದು ಪರಿಮಿಸಬಲ್ ಅಂಡರ್ ರೂಲ್ ೧೬ ಎಂದು ಹೇಳಿದ್ದಾರೆ. ಹೀಗೆ ಆದರೆ ಹರಿಜನರ ಗಿರಿಜನರ ಮಕ್ಕಳು ಹಾಗೂ ಕೋಚಿಪ್ಪದೇಶಗಳಲ್ಲಿರುವ ಬಡ ಹಣ್ಣು ಮಕ್ಕಳು ಇನ್ನು ಮುಂದೆ ವಿದ್ಯಾಭ್ಯಾಸ ಮಾಡುವುದಕ್ಕೆ ಸಾಧ್ಯವಿದೆಯೇ ? ಈ ರೀತಿ ಸ್ಟೇಟ್‌ಮೆಂಟ್ ಮಾಡಬಹುದೇ ? ನನ್ನ ಪ್ರಕಾರ ಹಾಗೂ ಕಾನೂನಿನ ಪ್ರಕಾರ ಅಂಡರ್ ರೂಲ್ ೧೬ರ ಡೋನೇಷನ್ ತೆಗೆದುಕೊಳ್ಳುವುದಕ್ಕೆ ಅವಕಾಷವಿಲ್ಲ. ಒಂದು ವೇಳೆ ತೆಗೆದುಕೊಂಡರೆ ಅಂತಹ ಸ್ಕೂಲು ಅಥವಾ ಕಾಲೇಜುಗಳನ್ನು ಏತಕ್ಕೆ ಡಿ ರೆಕ್‌ಗನೈಸ್ ಮಾಡಬಾರದು ? ಇಂತಹ ಪರಿಸ್ಥಿತಿಯಲ್ಲಿ ಮಾನ್ಯ ಮಂತ್ರಿಗಳು ಹೇಳಿರತ್ಕಂಥಾದ್ದು ಇದು ಡಾ ಕೋಜಿಂಗ್ ಸ್ಟೇಟ್‌ಮೆಂಟ್ ಮಾಡಿದಂತಾಗುವುದಿಲ್ಲವೇ ? ಇದನ್ನು ನೋಡಿದರೆ ಸಾರ್ವಜನಿಕರಿಗೆ ಸರ್ಕಾರದ ಬಗ್ಗೆ ಅಸಮಾಧಾನ ಬರುವ ರೀತಿಯಲ್ಲಿ ಇದೆ ಮಾನ್ಯ ಮಂತ್ರಿಗಳ ಪಕ್ಕದಲ್ಲೆ. ಕಾನೂನು ಮಂತ್ರಿಗಳು ಇಷ್ಟು ಹೊತ್ತು ಕುಳಿತಿದ್ದರು ಬೇಕಾದರ ಅವರನ್ನು ಕೇಳಲಿ ಅಥವಾ ಕಾನೂನು ಕಾರ್ಯದರ್ಶಿಗಳವರನ್ನು ಕೇಳಲಿ ಅಥವಾ ಅಡ್ವೊಕೇಟ್ ಜನರಲ್ ಒಪಿನಿಯನ್ ತೆಗೆದು ಕೊಳ್ಳಲಿ. ಡೊನೇಷನ್ ತೆಗೆದು ಕೊಳ್ಳಲಿಕ್ಕೆ ಅಧಿಕಾರವಿದೆಯೆ ? ಈ ರೀತಿ ಡೋನೇಷನ್

ಕೊಟ್ಟು ಓದಬೇಕಾದರೆ ಬೆಂಗಳೂರಿನಲ್ಲಿ ಅಲ್ಲ ಇಡೀ ಕರ್ನಾಟಕದಲ್ಲಿ ಹೆಣ್ಣು ಮಕ್ಕಳನ್ನು ಸ್ಕೂಲು ಕಾಲೇಜುಗಳಿಗೆ ಕಳುಹಿಸುವುದಕ್ಕೆ ಆಗುವುದಿಲ್ಲ. ಆದ್ದರಿಂದ ಮಾನ್ಯ ಮಂತ್ರಿಗಳು ಈ ವಿಚಾರವನ್ನು ತೀವ್ರವಾಗಿ ಆಲೋಚನೆ ಮಾಡಬೇಕೆಂದು ಕೇಳಿಕೊಳ್ಳುತ್ತೇನೆ. ನಮ್ಮ ಅಧಿಕಾರಿಗಳ ತಪ್ಪು ಗ್ರಹಿಕೆಯಿಂದ ಇಂತಹ ಕಾರ್ಯಗಳು ನಡೆಯುತ್ತವೆ. ತಪ್ಪು ಮಾಡುವುದು ಮನುಷ್ಯ ಸಹಜ. ಆದರೆ ಅದನ್ನು ತಿದ್ದಿಕೊಳ್ಳುವುದು ಬುದ್ಧಿವಂತರ ಲಕ್ಷಣ ಆದ್ದರಿಂದ ಮಾನ್ಯ ಮಂತ್ರಿಗಳು ಇದಕ್ಕೆ ಸರಿಯಾದ ಉತ್ತರ ಕೊಡಬೇಕೆಂದು ಕೇಳಿಕೊಳ್ಳುತ್ತೇನೆ.

ಶ್ರೀ ಎಚ್. ಗಂಗಾಧರನ್.— ಮಾನ್ಯ ಮಂತ್ರಿಗಳು ಸೈದ್ಧಾಂತಿಕವಾಗಿ ಉತ್ತರ ಕೊಟ್ಟಿದ್ದಾರೆ. ಆದರೆ ನಮ್ಮ ಮೈಸೂರು ನಗರದಲ್ಲಿ ನಮ್ಮ ಮುಂದೆ ಇರುವ ಸಮಸ್ಯೆ ಏನು ಎಂದರೆ ಒನೇ ತರಗತಿಯಲ್ಲಿ ಸೇಕಡ ೯೦ ಪರ್ಸೆಂಟ್ ವಿದ್ಯಾರ್ಥಿಗಳು ಉತ್ತೀರ್ಣರಾಗಿದ್ದಾರೆ ಅಲ್ಲಿ ಸಾಕಷ್ಟು ಹೈಸ್ಕೂಲುಗಳು ಇಲ್ಲ, ಇದ್ದಂತಹ ಹೈಸ್ಕೂಲುಗಳಲ್ಲಿ ಕೆಲವು ಡೀ ರೆಕ್‌ಗ್ನೈಸ್ ಆಗಿವೆ. ಇನ್ನು ಪ್ರಾಥಮಿಕ ಶಾಲೆಗಳು ಈಗಾಗಲೇ ಪ್ರಾರಂಭವಾಗಿವೆ ಕೆಲವು ಜನರು ಶಾಲೆಗಳನ್ನು ತೆರೆಯುವುದಕ್ಕೆ ಪರ್ಮಿಷನ್‌ಗೆ ಹಾಕಿದ್ದಾರೆ. ಅವರಿಗೆ ಪರ್ಮಿಷನ್ ಸಿಕ್ಕಿಲ್ಲ. ಈ ಎಲ್ಲಾ ಅಂಶಗಳನ್ನು ಗಮನಿಸಿ ಪ್ರಾಥಮಿಕ ಶಾಲೆಗಳಿಗೆ ಸೇರಿಸುವುದಕ್ಕೆ ಸಾಕಷ್ಟು ಶಾಲೆಗಳು ಇವೆ ಹೈಸ್ಕೂಲು ಎಷ್ಟು ಇವೆ ಅವುಗಳಲ್ಲಿ ಎಲ್ಲಾ ಮಕ್ಕಳಿಗೂ ಅವಕಾಶ ಕೊಡುವಂತಹ ವಿಪರ್ಯಾಸ ಆಗಿದೆಯೇ ? ಆಗಿದ್ದರೆ ವಿವರಗಳನ್ನು ಸಂಗ್ರಹಣೆ ಮಾಡಿದ್ದೀರಾ ? ಮಾಡಿದ್ದರೆ, ಅದನ್ನು ಮಾಡುವುದಕ್ಕೆ ಕೈಕೊಂಡಿರತಕ್ಕಂಥ ಕಾರ್ಯ ಕ್ರಮ ಏನು ತಿಳಿಸಿ ? ಇನ್ನು ಮೈಸೂರು ನಗರದಲ್ಲಿ ಜಾತಿಮತ ಭೇದವಿಲ್ಲದೆ ಶ್ರೀಮಂತಿಕೆ ಬಡತನ ಭೇದವಿಲ್ಲದೆ ಮಕ್ಕಳಿಗೆ ಅವಕಾಶ ಸಿಕ್ಕುವಂತಹ ರೀತಿಯಲ್ಲಿ ಯಾವುದೇ ರೀತಿಯ ಡೋನೇಷನ್ ಇಲ್ಲದೆ ಮಕ್ಕಳಿಗೆ ಸೀಟು ಸಿಕ್ಕುವಂತಹುದಕ್ಕೆ ಕೈಕೊಂಡ ಕಾರ್ಯಕ್ರಮವನ್ನು ತಿಳಿಸಬೇಕೆಂದು ತಮ್ಮ ಮೂಲಕ ಮಾನ್ಯ ಮಂತ್ರಿಗಳಲ್ಲಿ ವಿನಂತಿಸಿಕೊಳ್ಳುತ್ತೇನೆ.

ಶ್ರೀ ಮೈಕೆಲ್ ಬಿ. ಫರ್‌ನಾಂಡಿಸ್.—ಡೊನೇಷನ್ ವಸೂಲು ಮಾಡುವ ಪದ್ಧತಿಯಿಂದಾಗಿ ಎಲ್ಲಾ ಕಡೆಯಲ್ಲೂ ಕರೆಪಷನ್ ತಾಂಡವವಾಡುತ್ತಿದೆ.

ಮಕ್ಕಳ ಮೇಲೂ ಇದರಿಂದ ಕೆಟ್ಟ ಪರಿಣಾಮವಾಗುತ್ತಿದೆ. ಈ ವಿದ್ಯಾ ಶಾಲೆಗಳು ಟೆಂಪಲ್ ಆಫ್ ಲರ್ನಿಂಗ್ ಎಂದು ಭಾವಿಸಲಾಗಿದೆ.

ಇಂತಹ ಕಡೆಯಲ್ಲಿ Children are speaking in terms of corruption; Parents who are forced to pay donation are speaking in terms of corruption. Corruption starts right from the source of leorning. I think it is partly due to supply and demand. If the students and parents are both willing, you can run the colleges and schools on shift system. ಈಗ ಮುಖ್ಯವಾಗಿ ಏನಾಗಿದೆ ಎಂದರೆ ಸಪ್ಲೈ ಕಡಿಮೆ ಡಿಮಾಂಡ್ ಜಾಸ್ತಿಯಾಗಿದೆ. ಮಾನ್ಯ ಮಂತ್ರಿಗಳನ್ನು ಇದನ್ನು ಪರ್ಯಾಲೋಚನೆ ಮಾಡಿ ನೋಡಬೇಕು. ಇದಕ್ಕೆ ನಾನು ಒಂದು ಸಲಹೆಯನ್ನು ಕೊಡುವುದಕ್ಕೆ ಬಯಸುತ್ತೇನೆ. ಅದು ಏನೆಂದರೆ ಇದಕ್ಕೆ ಸ್ಟೂಡೆಂಟ್ಸ್ ಹಾಗೂ, ಪೇರೆಂಟ್ಸ್ ಕೂಡ ಒಪ್ಪುತ್ತಾರೆಂದು ನಂಬಿದ್ದೇನೆ. ಷಿಫ್ಟ್ ಬೇಸಿಸ್‌ನಲ್ಲಿ ಕಾಲೇಜು ಮತ್ತು ಸ್ಕೂಲುಗಳನ್ನು ಮಾಡಿದರೆ ಸ್ವಲ್ಪ ಪರಿಸ್ಥಿತಿ ಸುಧಾರಿಸುತ್ತದೆಂದು ನಾನು ತಿಳಿದಿದ್ದೇನೆ. ಈ ಪಾಪ್ಯುಲೇಷನ್ ಎಕ್ಸ್‌ಪ್ಲೋಷನ್‌ನಿಂದ ಈ ರೀತಿ ತೊಂದರೆಯಾಗಿದೆ, ಅದನ್ನು ಎಲ್ಲರೂ ಒಪ್ಪಬೇಕಾಗಿ ಬರುತ್ತದೆ. ಈ ರೀತಿ ಮಾಡುವಾಗ... If any particular authority is willing to introduce the shift system, you can allow them to run their schools and colleges on shift system. ಏಕೆಂದರೆ ಎಲ್ಲಾ ಸ್ಕೂಲುಗಳಲ್ಲಿ ಮಾಡುವುದಕ್ಕೆ ಆಗುವುದಿಲ್ಲ. ಎಲ್ಲವನ್ನು ಇದರ ವ್ಯಾಪ್ತಿಗೆ ಕೊಡುವುದಕ್ಕೆ ಆಗುವುದಿಲ್ಲ, ಇನ್ನು ಎರಡನೇಯದಾಗಿ ಪ್ರೈವೇಟ್ ಸ್ಕೂಲ್ ಮತ್ತು ಕಾಲೇಜುಗಳಲ್ಲಿ ಹಾಗೂ ಸರ್ಕಾರಿ ಕಾಲೇಜುಗಳಲ್ಲಿ ಅಲ್ಲಿ ಓದಿದಂತಹ ಮಕ್ಕಳಿಗೆ ಸೀಟುಗಳನ್ನು ಕೊಡುವುದಕ್ಕೆ ಸಾಧ್ಯವಾಗುವುದಿಲ್ಲ. ಉದಾಹರಣೆಗೆ ಹೇಳುವುದಾದರೆ ಮಹಾರಾಣೀಸ್ ಕಾಲೇಜಿನಲ್ಲಿ ಕೇವಲ ನಾಲ್ಕು ನೂರು ಸೀಟುಗಳಿವೆ. ಅಲ್ಲಿಗೆ ಅರ್ಜಿ ಬಂದಿರುವುದು ಒಂದುಸಾವಿರದ ನಾಲ್ಕುನೂರು. ಆದ್ದರಿಂದ ಅಲ್ಲಿ ಓದಿದ ಹೆಣ್ಣು ಮಕ್ಕಳಿಗೆ ಸೀಟುಕೊಡುವುದಕ್ಕೆ ಸಾಧ್ಯವಾಗುವುದಿಲ್ಲ. ಆದ್ದರಿಂದ ಮಾನ್ಯಮಂತ್ರಿಗಳು ಇದನ್ನು ಒಂದು ಫೇಸ್ಡ್ ಪ್ರೋಗ್ರಾಂ ಪ್ರಕಾರ ಮಾಡುವಂತಹ ರೀತಿಯಲ್ಲಿ ಮಾಡಬೇಕಾಗುತ್ತದೆ. ಇನ್ನು ಮೂರನೆಯ

ದಾಗಿ ಈ ಬಂದು ಡೊನೇಷನ್ ಪದ್ಧತಿಯಲ್ಲಿ ಸ್ಕೂಲು ಆಫಿಕಾರಿಗಳು ಏನು ಕಾರಣ ಕೊಡುತ್ತಾರೆ ಎಂದರೆ ಬಿಲ್ಡಿಂಗ್ ಎಕ್ಸ್‌ಪ್ಯಾಂಡ್ ಮಾಡಬೇಕು ಎಂದು ಆದರೆ ನಮ್ಮ ಸರ್ಕಾರಿ ಆಫಿಕಾರಿಗಳು ಏತಕ್ಕೆ ಕೇಳಬಾರದು ಸ್ಕೂಲ್ ಬಿಲ್ಡಿಂಗ್ ಎಕ್ಸ್‌ಪ್ಯಾಂಡ್ ಮಾಡುತ್ತಿರೋ ಆಥವಾ ನಿಮ್ಮ ಮನೆಗಳನ್ನು ಎಕ್ಸ್‌ಪ್ಯಾಂಡ್ ಮಾಡುತ್ತಿರೋ ಎಂದು? ನಿಜವಾದ ಕಾರಣ ಕೊಟ್ಟರೆ ಮಾತ್ರ ಆದಕ್ಕೆ ಎಷ್ಟು ಹಣ ಬೇಕಾಗುತ್ತದೆ ಆದನ್ನು ಸರ್ಕಾರವೇ ಕೊಡಬೇಕು. ಇದನ್ನು ಮಾನ್ಯ ಮಂತ್ರಿಗಳು ಕನ್ಸಿಡರ್ ಮಾಡ ಬೇಕು ಎಂದು ವಿನಂತಿ ಮಾಡುತ್ತೇನೆ.

ಶ್ರೀ ಎಂ. ಚಂದ್ರಶೇಖರ್.—ಶಿಕ್ಷಣ ಸಂಸ್ಥೆಗಳಲ್ಲಿ ಮುಖ್ಯವಾಗಿ ಪ್ರೈವೇಟ್ ಇನ್ಸ್‌ಟಿಟ್ಯೂಷನ್ ಗಳಲ್ಲಿ ಮಕ್ಕಳ ಉತ್ತೀರ್ಣತೆ ಜಾಸ್ತಿಯಾಗಲು ಹಾಗೂ ಸರ್ಕಾರಿ ಸ್ಕೂಲ್, ಕಾಲೇಜುಗಳಲ್ಲಿ ಮಕ್ಕಳ ಉತ್ತೀರ್ಣತೆ ಕಡಿಮೆಯಾಗಲು ಕಾರಣವೇನು? ಇದಕ್ಕೆ ಸರ್ಕಾರಿ ಸ್ಕೂಲ್, ಕಾಲೇಜುಗಳಲ್ಲಿನ ಸಿಬ್ಬಂದಿಯ ಅದಕ್ಷತೆಯೇ ಮುಖ್ಯ ಕಾರಣವೆಂದು ಹೇಳಬೇಕಾಗುತ್ತದೆ. ಖಾಸಗಿ ಶಾಲೆಗಳ ಆಧ್ಯಾಪಕ ಹಾಗೂ ಸರ್ಕಾರಿ ಸ್ಕೂಲು, ಕಾಲೇಜುಗಳ ಆಧ್ಯಾಪಕರ ಸಂಬಳ ಸಾರಿಗೆಗಳಲ್ಲಿ ಯಾವ ರೀತಿಯ ವ್ಯತ್ಯಾಸ ವಿರುವುದಿಲ್ಲ. ಹಾಗಿದ್ದೂ ಪ್ರೈವೇಟ್ ಇನ್ಸ್‌ಟಿಟ್ಯೂಷನ್‌ಗಳಲ್ಲಿ ಆಧ್ಯಾಪಕರು ದಕ್ಷತೆಯಿಂದ ಕೆಲಸ ಮಾಡುವುದಕ್ಕೆ ಕಾರಣವೇನು? ಇದರ ಜವಾಬ್ದಾರಿಯನ್ನು ಸರ್ಕಾರಿ ಸ್ಕೂಲು, ಕಾಲೇಜುಗಳಲ್ಲಿನ ಮುಖ್ಯೋಪಾಧ್ಯಾಯರ ಮೇಲೆ ಹೊರಿಸಬೇಕಾಗುತ್ತದೆ. ಹಿಂದೆ ನಮ್ಮ ವಿದ್ಯಾಇಲಾಖೆಯ ಆಧಿಕಾರಿಗಳು ಇನ್ಸ್‌ಪೆಕ್ಷನ್ ಹೋದಾಗ ಯಾವುದೇ ತಪ್ಪುಗಳು ಇದ್ದರೆ ಅಲ್ಲಿನ ಸಿಬ್ಬಂದಿಯವರ ಮೇಲೆ ಕ್ರಮ ತೆಗೆದು ಕೊಳ್ಳುತ್ತಿದ್ದರು. ಆದರೆ ಇತ್ತೀಚೆಗೆ ಕೇವಲ ಅವರು ಬಿಲ್ಲು ಪಾಸ್ ಮಾಡುವುದಕ್ಕೆ ಇದ್ದಾರೋ ಎನ್ನುವ ಹಾಗೆ ಆಗಿದೆ. ಆದ್ದರಿಂದ ವಿದ್ಯಾಭ್ಯಾಸದ ಮಟ್ಟವನ್ನು ಸರ್ಕಾರಿ ಶಾಲೆ ಹಾಗೂ ಕಾಲೇಜು ಗಳಲ್ಲಿ ಅಭಿವೃದ್ಧಿಪಡಿಸಬೇಕಾದರೆ ಆ ಸಂಸ್ಥೆಯ ಹೆಡ್‌ಮಾಸ್ಟರ್ ಹಾಗೂ ಪ್ರಿನ್ಸಿಪಾಲರಿಗೆ ಜವಾಬ್ದಾರಿ ಯನ್ನು ಗೊತ್ತುಮಾಡಿ ಸರ್ಕಾರ ಕ್ರಮ ತೆಗೆದುಕೊಳ್ಳುವುದಕ್ಕೆ ಸಾಧ್ಯವಿರುವಂತೆ ನೋಡಿಕೊಳ್ಳಬೇಕು. ಇನ್ನು ಎರಡನೆಯದಾಗಿ ನಾನು ಮೊದಲೇ ಹೇಳಿದಹಾಗೆ ಸರ್ಕಾರಿ ಪಾಠಶಾಲೆಗಳು ನಡೆಯುವಂಥ ಸ್ಥಳಗಳಲ್ಲಿ, ಸಾಮಾನ್ಯವಾಗಿ ಬಡಜನಗಳು ಇರುವಂಥ ಸ್ಥಳಗಳಲ್ಲಿ ಹಿಂದೆ ಆವಂಥ ಸಾಮಾನ್ಯ ಬಡಾವಣೆ ಗಳು ಇವೆ. ನಮ್ಮ ಮಾನ್ಯ ಸ್ನೇಹಿತರು ಹೇಳಿದ ಹಾಗೆ ಪಾಪುಲೇಷನ್ ಎಕ್ಸ್‌ಪ್ಲಾಯ್‌ಟೇಷನ್‌ನಿಂದ ಅವು ದೊಡ್ಡ ಬಡಾವಣೆಗಳಾಗಿವೆ. ಆದರೆ ನಮ್ಮ ಸರ್ಕಾರಿ ಸಂಸ್ಥೆಗಳು ಆಥವಾ ಸರ್ಕಾರಿ ಪಾಠ ಶಾಲೆಗಳು ಮಾತ್ರ ಆವುಗಳ ಅಭಿವೃದ್ಧಿ ಹೆಚ್ಚಾಗಿ ಆಗಿಲ್ಲ. ಮತ್ತು ಆವುಗಳು ಹೆಚ್ಚಾಗಿ ಪ್ರಖ್ಯಾತಿಯಾಗಿಲ್ಲ. ಈ ಕಾರಣದಿಂದಾಗಿ ಆನೇಕ ಕಡೆ ಇರುವ ಶಿಥಿಲ ಕಟ್ಟಡಗಳು ಮತ್ತು ಮಕ್ಕಳಿಗೆ ಆಡುವುದಕ್ಕೆ ಮೈದಾನ ಇವು ಇಲ್ಲದೇ ಇರುವುದರಿಂದ ಸಾಮಾನ್ಯವಾಗಿ ಪೋಷಕರು ಏನು ಮಾಡುತ್ತಾರೆ ಎಂದರೆ ಎಲ್ಲಿ ಆವಕಾಶ ಎಲ್ಲಾ ಅನುಕೂಲ ಸಿಕ್ಕುತ್ತದೆಯೋ ಆಲ್ಲಿ ತಮ್ಮ ಮಕ್ಕಳನ್ನು ಸೇರಿಸುವುದಕ್ಕೆ ಯೋಜನೆ ಮಾಡುತ್ತಾರೆ. ಆದ್ದರಿಂದ ಸರ್ಕಾರಿ ಶಾಲೆಗಳು ಪ್ರಖ್ಯಾತಿಗೆ ಬರಬೇಕಾದರೆ ಸರ್ಕಾರದವರು ಶಾಲೆಗಳಿಗೆ ಒಳ್ಳೆಯ ಕಟ್ಟಡದ ವ್ಯವಸ್ಥೆ ಮಾಡಬೇಕು ಮತ್ತು ಮಕ್ಕಳಿಗೆ ಆಟ ಆಡುವುದಕ್ಕೆ ತಕ್ಕಂಥ ಮೈದಾನವನ್ನು ವ್ಯವಸ್ಥೆ ಮಾಡ ಮಾಡಬೇಕು. ಇನ್ನು ಮೂರನೆಯದಾಗಿ ಈಗ ಇಂಗ್ಲೀಷ್ ವ್ಯಾಮೋಹ ಬಹಳವಾಗಿದೆ. ಇಂಗ್ಲೀಷ್ ಮಾಧ್ಯಮದ ಸ್ಕೂಲ್‌ಗಳು ಜಾಸ್ತಿ ಇವೆ. ಕೊನೆಯ ಪಕ್ಷ ಏನೇ ಸ್ಪಾಂಡರ್ಡ್‌ವರೆಗೆ ಕನ್ನಡ ಮಾಧ್ಯಮ ಕಡ್ಡಾಯವಾಗಿ ಇರುವಂತೆ ಮತ್ತು ಆಮೇಲೆ ಇಂಗ್ಲೀಷ್ ಆಥವಾ ಬೇರೆ ಮಾಧ್ಯಮ ಇರುವಂತೆ ಮಾಡುವುದರ ಬಗ್ಗೆ ಸರ್ಕಾರ ಕ್ರಮ ತೆಗೆದುಕೊಂಡರೆ ಇಂಗ್ಲೀಷ್ ಮಾಧ್ಯಮದ ಸ್ಕೂಲ್‌ಗಳು ಕಡಿಮೆ ಯಾಗುತ್ತವೆ ಎಂದು ಹೇಳಿ ನನ್ನ ಮಾತನ್ನು ಮುಂಗಿಸುತ್ತೇನೆ.

ಶ್ರೀ ಸಿ. ಎಂ. ಇಬ್ರಾಹಿಂ.—ಸ್ವಾಮಿ, ನನ್ನ ಕ್ಷೇತ್ರದ ಮಟ್ಟಿಗೆ ಪ್ರೈಮರಿ ಸ್ಕೂಲ್‌ಗಳು, ಮಿಡಲ್ ಸ್ಕೂಲ್‌ಗಳು ಮತ್ತು ಹೈಸ್ಕೂಲ್ ಬಿಲ್ಡಿಂಗ್ ಕಟ್ಟಿಸುವುದಕ್ಕೆ ೪೫೦೦ ರೂಪಾಯಿಗಳ ಗ್ರಾಂಟನ್ನು ಕೊಡುತ್ತಾರೆಂದು ತಿಳಿದುಬಂದಿದೆ. ಆದನ್ನು ಕೊಟ್ಟುಬಿಡಿ. ಕಟ್ಟಡವನ್ನು ನಾವೇ ಪೂರ್ತಿಯಾಗಿ ಕಟ್ಟಿಸಿಕೊಳ್ಳುತ್ತೇವೆ. ಇನ್ನು ಎರಡನೆಯದಾಗಿ ಸ್ಕೂಲ್‌ಗಳಲ್ಲಿ ಬೆಂಚ್‌ಗಳಾಗಲಿ ಇರುವುದಿಲ್ಲ. ಈ ಬಗ್ಗೆ ಹೇಳತಕ್ಕಂಥ ವಿಚಾರಗಳು ಬಹಳ ಇವೆ. ಆದನ್ನು ಹೇಳುವುದಕ್ಕೆ ಹೋದರೆ ಡಿಮ್ಯಾಂಡ್ಸ್ ಬಂದಾಗ ಮಾತನಾ ಎಂದು ಹೇಳುತ್ತಾರೆ. ಈ ವಿಷಯದಮೇಲೆ ಮಾತನಾಡುವಾಗ ಮಾನ್ಯ ಹಣ ಕಾಸಿನ ಮಂತ್ರಿ ಯವರು ತಲೆ ಅಲ್ಲಾಡಿಸಿಕೊಂಡು ಕುಳಿತಿರುತ್ತಾರೆ. ಇಲ್ಲಿ ಸಂಬಂಧಪಟ್ಟ ಮಂತ್ರಿಗಳೇ ಇರುವುದಿಲ್ಲ. ನಾವು ಡಿಮ್ಯಾಂಡ್ಸ್ ಬಗ್ಗೆ ಮಾತನಾಡುವಾಗ ನಾವು ಹೇಳತಕ್ಕಂಥ ವಿಷಯ ಇಂತಹ ಮಂತ್ರಿಗಳ ಗಮನಕ್ಕೆ ಬಂದಿದೆ ಎಂದು ನನಗೆ ಹೇಗೆ ಗೊತ್ತಾಗುತ್ತದೆ? ಸಂಬಂಧಪಟ್ಟ ಮಂತ್ರಿಯವರು ಇಲ್ಲಿ ಇರುವುದಕ್ಕೆ ಏನಾಗಿದೆ ಎಂದು ಕೇಳುತ್ತೇನೆ.

ಶ್ರೀ ಬಿ. ಬಸವಲಿಂಗಪ್ಪ.—ಮಾನ್ಯ ಸದಸ್ಯರು ಡಿಮ್ಯಾಂಡ್ಸ್ ಬಗ್ಗೆ ಮಾತನಾಡುವಾಗ ಮಾನ್ಯ ಮಂತ್ರಿಯವರು ಇರುವುದಿಲ್ಲ ಮತ್ತು ಜನರಲ್ ಡಿಸ್ಕಷನ್ ನಡೆಯುವಾಗ ಸಂಬಂಧಪಟ್ಟ ಮಂತ್ರಿಯವರು ಇಲ್ಲಿ ಇರಂವುದಿಲ್ಲ ಎಂದು ಹೇಳುತ್ತಿದ್ದಾರೆ. ನಾನು ಹೇಳುತ್ತೇನೆ ಡಿಮ್ಯಾಂಡ್ಸ್‌ಗಳು ಪ್ರತ್ಯೇಕ ಪ್ರತ್ಯೇಕವಾಗಿ ಬರುತ್ತವೆ. ಆಗ ಸಂಬಂಧಪಟ್ಟ ಮಂತ್ರಿಗಳು ಇದ್ದೇ ಇರುತ್ತಾರೆ. ಆಗ ಡಿಮ್ಯಾಂಡ್‌ಗೆ ಸಂಬಂಧಪಟ್ಟಹಾಗೆ ಎಷ್ಟು ಬೇಕಾದರೂ ಭಾಷಣ ಮಾಡಬಹುದು. ಈಗ ಜನರಲ್ ಡಿಸ್ಕಷನ್ ಪ್ರಾರಂಭ ಮಾಡಬೇಕು. ಈ ಕಾಲಿಂಗ್ ಅಟೆನ್‌ಷನ್‌ನಲ್ಲಿ ನೀವು ಅನಾವಶ್ಯವಾಗಿ ಆಗ ಮಾತನಾಡುವುದನ್ನು ಈಗ ಮಾತನಾಡಕೂಡದು ಎಂದು ಹೇಳುತ್ತೇನೆ.

ಶ್ರೀ ಎಂ. ಚಂದ್ರಶೇಖರ್.—ಈಗ ತಮ್ಮ ಮಕ್ಕಳೂ ಸ್ಕೂಲ್‌ಗಳಲ್ಲಿ ತೊಂದರೆ ಅನುಭವಿಸುತ್ತಿದ್ದಾರೆ. ಅದನ್ನು ತಾವು ಮಾತನಾಡಿ.

ಶ್ರೀ ಎಸ್. ಆರ್. ಬೊಮ್ಮಾಯಿ.—ತಮ್ಮ ಡಿಮ್ಯಾಂಡ್ ಬರುವುದರೊಳಗೆ ಸ್ಕೂಲ್‌ಗಳಲ್ಲಿ ಅಡ್ಮಿಷನ್ ಡೇಟ್ ಮುಗಿದು ಹೋಗಿರುತ್ತದೆ. Let the Hon. Minister say directly what arrangement has been made for admission.

ಶ್ರೀ ಎಂ. ವಿ. ರಾಜಶೇಖರನ್.—ಸ್ವಾಮಿ, ಈಗ ನಮ್ಮ ಮಾನ್ಯ ಸ್ನೇಹಿತರಾದ ಫರ್ನಾಂಡಿಸ್ ವರು ಒಂದು ವಿಚಾರವನ್ನು ಸರ್ಕಾರದವರ ಗಮನಕ್ಕೆ ತಂದರು. ಅದೇ ವಿಚಾರದಲ್ಲಿ ನನ್ನ ಅಭಿಪ್ರಾಯವೇನೆಂದರೆ ಈಗಾಗಲೇ ಮಹಾರಾಣಿ ಕಾಲೇಜಿನಲ್ಲಿ ೪೦೦ ಸೀಟುಗಳಿಗೆ ೨೦೦೦ ಅಪ್ಲಿಕೇಷನ್‌ಗಳು ಹೋಗಿವೆ. ಈ ಒಂದು ಪರಿಸ್ಥಿತಿಯನ್ನು ಮಾನ್ಯಮಂತ್ರಿಯವರು ಯಾವರೀತಿಯಲ್ಲಿ ಬಗೆಹರಿಸುತ್ತಾರೆ ಎಂಬುದನ್ನು ತಿಳಿಸಬೇಕು. ಸರ್ಕಾರದ ಕರ್ತವ್ಯಲೋಪದಿಂದ ಈ ಒಂದು ಸಮಸ್ಯೆ ಬಂದಿದೆ. ಈ ಸಮಸ್ಯೆಯಲ್ಲಿ ತೊಂದರೆಗೆ ಈಡಾಗಿರತಕ್ಕಂಥವರು ಎಂದರೆ ಬಡಜನರು. ಹಣವಂತರು ಬೇಕಾದಷ್ಟು ದುಡ್ಡು ಕೊಟ್ಟು ತಮ್ಮ ಮಕ್ಕಳನ್ನು ಪ್ರೈವೇಟ್ ಸ್ಕೂಲ್‌ಗಳಿಗೆ ಸೇರಿಸುತ್ತಾರೆ. ಅವರಿಗೇನೂ ತೊಂದರೆಯಿಲ್ಲ. ಆದರೆ ಇಲ್ಲಿ ಬರತಕ್ಕಂಥ ಕಷ್ಟ ಬಡಜನರಿಗೆ. ಸರ್ಕಾರದ ಕರ್ತವ್ಯಚ್ಯುತಿಯಿಂದ ಈ ಪರಿಸ್ಥಿತಿ ಇರತಕ್ಕಂಥಾದ್ದು ಮತ್ತು ಈ ಸಮಸ್ಯೆ ಬಂದಿರತಕ್ಕಂಥಾದ್ದು ಎಂದು ನಾನು ಮತ್ತೊಮ್ಮೆ ಹೇಳುವುದಕ್ಕೆ ಬಯಸುತ್ತೇನೆ. ಈಗಾಗಲೇ ಮಹಾರಾಣಿ ಕಾಲೇಜಿನಲ್ಲಿ ೨೦೦೦ ವಿದ್ಯಾರ್ಥಿನಿಯರು ಏನು ಅಪ್ಲಿಕೇಷನ್‌ಗಳನ್ನು ಹಾಕಿಕೊಂಡಿದ್ದಾರೆ ಅವರೆಲ್ಲರಿಗೂ ಸೀಟುಗಳನ್ನು ಒದಗಿಸಿಕೊಡುವ ವಿಚಾರದಲ್ಲಿ ಸರ್ಕಾರ ಏನು ಕ್ರಮ ತೆಗೆದುಕೊಳ್ಳುತ್ತಾರೆ ಎಂಬುದನ್ನು ತಿಳಿಸಬೇಕೆಂದು ನಾನು ಕೇಳಿಕೊಳ್ಳುತ್ತೇನೆ. ಇನ್ನು ಎರಡನೆಯ ವಿಚಾರವೇನೆಂದರೆ ಮಹಾರಾಣಿ ಕಾಲೇಜಿನ ಬಿಲ್ಡಿಂಗ್ ಕನ್‌ಸ್ಟ್ರಕ್ಷನ್ ಆಗುತ್ತಿದೆ ಎಂದು ಹೇಳುತ್ತಿದ್ದಾರೆ. ಈಗಾಗಲೇ ಕೆಲಸ ಶುರುವಾಗಿದ್ದು ಸಿಮೆಂಟ್ ಇಲ್ಲದೇ ಕೆಲಸ ಅಷ್ಟಕ್ಕೇ ನಿಂತಿದೆ. ಇದರಿಂದ ಅಲ್ಲಿ ಅಡ್ಮಿಷನ್ ಮುಗಿದಮೇಲೆ ವಿದ್ಯಾರ್ಥಿನಿಯರು ಎಲ್ಲಿ ಕೂತುಕೊಳ್ಳುತ್ತಾರೆಯೋ ಗೊತ್ತಿಲ್ಲ. ಮಹಾರಾಣಿ ಕಾಲೇಜಿನ ಬಿಲ್ಡಿಂಗ್‌ನ್ನು ಪೂರ್ಣ ಮಾಡುವುದಕ್ಕೆ ಅತಿಶೀಘ್ರವಾಗಿ ಸಿಮೆಂಟನ್ನು ಸರ್ಕಾರದವರು ಕೊಡಿಸಿಕೊಡುವುದಕ್ಕೆ ಪ್ರಯತ್ನ ಮಾಡಬೇಕು ಮತ್ತು ಎಷ್ಟು ಶೀಘ್ರವಾಗಿ ಅವರಿಗೆ ಸಿಮೆಂಟನ್ನು ಕೊಡಿಸುತ್ತೀರಿ ಎಂದು ಮಾನ್ಯಮಂತ್ರಿಯವರು ತಿಳಿಸಬೇಕು.

ಶ್ರೀ ಬಿ. ಸುಬ್ಬಯ್ಯಶೆಟ್ಟಿ.—ಮಾನ್ಯ ಸಭಾಧ್ಯಕ್ಷರೇ, ನಾನು ಕೆಲವು ವಿಚಾರಗಳನ್ನು ಆಗಲೇ ತಿಳಿಸಿದ್ದೇನೆ. ಅನಂತರ ಮಾನ್ಯ ಸದಸ್ಯರುಗಳನೇಕರು ಹೇಳಿರತಕ್ಕಂಥ ವಿಚಾರಗಳಲ್ಲಿ ನಾನು ಮೊದಲೇ ತಿಳಿಸಿ ಆಗಿದೆ. ಡೊನೇಷನ್ ಬಗ್ಗೆಯಾಗಲೀ ಅಥವಾ ಈ ಶಾಲೆಗಳ ಗುಣಮಟ್ಟವನ್ನು ಉತ್ತಮ ಪಡಿಸುವ ಬಗ್ಗೆಯಾಗಲೀ ನಾನು ಆಗಲೇ ತಿಳಿಸಿದ್ದೇನೆ. ಮಾನ್ಯ ಸದಸ್ಯರಾದ ಲಕ್ಷ್ಮೀಸಾಗರ್‌ರವರು ವರ್ಗಾವಣೆ ವಿಚಾರದಲ್ಲಿ ಹೇಳಿದ್ದಾರೆ ಮತ್ತು ಅಧ್ಯಾಪಕರುಗಳು ಅವರವರೇ ಶಾಲೆಗಳನ್ನು ನಡೆಸುತ್ತಿದ್ದಾರೆ ಎಂದೂ ತಿಳಿಸಿದಾರೆ. ಆ ಬಗ್ಗೆ ಎಲ್ಲಾ ಅಧ್ಯಾಪಕರೂ ಹಾಗೆ ಮಾಡುತ್ತಾರೆ ಎಂದು ನಾನಾದರೂ ಹೇಳುವುದಕ್ಕೆ ತಯಾರು ಇಲ್ಲ. ಕೆಲವಾರು ಜನ ಅಂತಹ ಅಧ್ಯಾಪಕರುಗಳು ಇದ್ದಾರೆ ನನ್ನ ಗಮನಕ್ಕೆ ಬಂದಿದೆ. ಮತ್ತು ಈ ಡಿಪಾರ್ಟ್‌ಮೆಂಟಿನ ವಿಚಾರದಲ್ಲಿ ಕೂಡ ಮಾನ್ಯ ಮಳ್ಳೂರು ಆನಂದರಾವ್‌ರವರು ತಮ್ಮ ಕಳಕಳಿಯ ವಿಚಾರವನ್ನು ವ್ಯಕ್ತಪಡಿಸಿದ್ದಾರೆ. ಇತರ ಮಾನ್ಯ ಸದಸ್ಯರೂ ಸರ್ಕಾರಿ ಸ್ಕೂಲ್‌ಗಳ ಬಗ್ಗೆ ತಮ್ಮ ವಿಚಾರವನ್ನು ವ್ಯಕ್ತಪಡಿಸಿದ್ದಾರೆ ಈ ಬಗ್ಗೆ ನಾನು ಈಗಾಗಲೇ ಹೇಳಿಬಿಟ್ಟಿದ್ದೇನೆ. ಆದರೂ ಇನ್ನೊಮ್ಮೆ ಹೇಳಬೇಕೆಂದರೆ ಈ ಸರ್ಕಾರಿ ಶಾಲೆಗಳು ಏನೇನಿವೆ ಅವುಗಳ ಗುಣಮಟ್ಟ ಒಳ್ಳೆಯದಿದೆ ಎಂದು ನಾನು ಹೇಳುತ್ತಾ ಇಲ್ಲ. ಅವುಗಳ ಗುಣಮಟ್ಟವನ್ನು ಉತ್ತಮಪಡಿಸುವ ಉದ್ದೇಶದಿಂದ ನಾವು ಈಗಾಗಲೇ ಈ ದಿಶೆಯಲ್ಲಿ ಕೆಲಸ ಮಾಡುವುದಕ್ಕೆ ಶುರು ಮಾಡಿದ್ದೇವೆ. ನಾವು

ಈ ಬಗ್ಗೆ ಎಲ್ಲವನ್ನೂ ಸಂಪೂರ್ಣವಾಗಿ ಮಾಡುತ್ತೇವೆಂದು ಹೇಳುವುದಕ್ಕೆ ಬರದೇ ಇದ್ದರೂ ಕೂಡ I am attempting to do it and I hope I will succeed. My primary intention is to improve the image of these Government Schools. To improve the image we require good buildings and we have to providing good teaching standard. I am addressing myself to that I am at it. ಮತ್ತೆ ಈ ಡೊನೇಷನ್ ಬಗ್ಗೆ ಕೆಲವು ಮಾನ್ಯ ಸದಸ್ಯರು ಹೇಳಿದ್ದಾರೆ. ಗ್ರಾಂಟ್ ಇನ್ ಎಡ್ ಕೋಡ್‌ನಲ್ಲಿ ಅದನ್ನು ಹೇಳಿದ್ದಾರೆಯೇ ಹೊರತು not that I approve of it. I am against it. ಅದನ್ನು ಯಾವರೀತಿ ಕಂಟ್ರೋಲ್ ಮಾಡಬೇಕು ಎಂದು ಹೇಳುವ ವಿಚಾರದಲ್ಲಿ ಸರ್ಕಾರ ಏನು ಮಾಡುವುದಕ್ಕೂ ಉದ್ಯುಕ್ತವಾಗಿದೆ ಎಂದು ನಾನು ಆಗಲೇ ಹೇಳಿದ್ದೇನೆ ಈ ಬಗ್ಗೆ ಒಂದು ಕಾನೂನನ್ನು ತರಬೇಕೆಂದಿದ್ದೇವೆ. ಮತ್ತೆ ಇನ್ನೊಂದು ವಿಚಾರವೇನೆಂದರೆ ಈ ಸೀಟುಗಳ ಬಗ್ಗೆ ಅನೇಕ ಮಾನ್ಯ ಸದಸ್ಯರುಗಳು ಹೇಳಿದ್ದಾರೆ. ಹೆಚ್ಚಾಗಿ ನನ್ನ ಗಮನಕ್ಕೆ ಬಂದ ವಿಚಾರವೆಂದರೆ ಕೆಲವು ಶಾಲೆಗಳಲ್ಲಿ ಮಾತ್ರ ಅಂತಹ ದೊಡ್ಡ ರಷ್ ಇದೆಯೆಂದು ಹೇಳಿದ್ದಾರೆ ಕೆಲವಾರು ಶಾಲೆಗಳಲ್ಲಿ ಅಲ್ಲೇ ತಮ್ಮ ಮಕ್ಕಳಿಗೆ ಸೀಟು ಸಿಕ್ಕಬೇಕು ಎಂದು ಕೆಲವರಿಗೆ ಭಾವನೆಯಿರುತ್ತದೆ. ಅಲ್ಲಿ ಇಷ್ಟೇ ಸೀಟುಗಳು ಎಂದು ನಿಗದಿಯಾಗಿರುತ್ತದೆ.ಆಗ ಅಲ್ಲಿ ಅವರಿಗೆ ಅಕಾಮೊಡೇಟ್ ಮಾಡಲಾಗದಿದ್ದಕ್ಕೆ ಆಗುವುದಿಲ್ಲ. ಇನ್ನು ಕೆಲವರಿಗೆ ಇಂಗ್ಲೀಷ್ ಮಾಧ್ಯಮ ಇರತಕ್ಕಂಥ ಸ್ಕೂಲುಗಳೇ ಆಗಬೇಕು, ಅಲ್ಲೇ ಅವರಿಗೆ ಸೀಟುಸಿಕ್ಕಬೇಕು ಎಂದು ಭಾವನೆಯಿರುತ್ತದೆ. ಬಹುಷಃ ಇಂಗ್ಲೀಷ್ ಮಾಧ್ಯಮದ ಸ್ಕೂಲುಗಳಲ್ಲಿ ಸೀಟುಗಳನ್ನು ಕೊಡಿಸುವುದಕ್ಕೆ ಸರ್ಕಾರದಿಂದ ಸಾಧ್ಯವಾಗುವುದಿಲ್ಲ ಎಂದು ನನ ಮನಸ್ಸಿಗೆ ಕಾಣುತ್ತಿದೆ. ಆದರೆ ಈ ರಾಜ್ಯದಲ್ಲಿ ಎಲ್ಲೆಲ್ಲಿ ಪ್ರೈಮರಿ ಸ್ಕೂಲ್‌ಗಳ ಅವಶ್ಯಕತೆ ಇದೆ ಅಲ್ಲಿ ನಾವು ಅದನ್ನು ತೆರೆಯುತ್ತಾ ಇದ್ದೇವೆ. ಎಲ್ಲೆ ಪ್ರೈಮರಿ ಸ್ಕೂಲುಗಳು ಇಲ್ಲ ಎಂದು ನಮಗೆ ಕಂಡು ಬಂದಿದೆ ಅಲ್ಲೆಲ್ಲಾ ನಾವು ಶಾಲೆಗಳನ್ನು ತೆರೆಯುತ್ತಿದ್ದೇವೆ. ಹಳ್ಳಿಗಳಲ್ಲಿ ಒಂದೂವರೆ ಕಿಲೋಮೀಟರುಗಳ ಅಂತರದಲ್ಲಿ ಎಲ್ಲಿ ಶಾಲೆಗಳು ಇಲ್ಲ ಅಲ್ಲಿ ಶಾಲೆಗಳನ್ನು ತೆರೆಯುತ್ತಿದ್ದೇವೆ. ಈ ವಿಚಾರದಲ್ಲಿ ಒಂದು ಪ್ಲಾನಿಂಗ್ ಇದೆ. ಇದನ್ನು ಸದ್ಯದಲ್ಲಿ ಮಾಡುತ್ತಿದ್ದೇವೆ. I am trying to clear the backlog of 30 years. I would request the hon. Members through the Chair that they may give all their suggestions regarding this matter to me.

SRI P. RAMADEV.—We want a specific assurance from the hon. Minister that those who want seats in tha city will be provided.

[ಚೇರ್ಮನ್ (ಶ್ರೀ ಎಂ. ಸಿ. ನಾನಯ್ಯನವರು) ಅಧ್ಯಕ್ಷರ ಪೀಠವನ್ನು ಅಲಂಕರಿಸಿದರು]

ಸ್ವಾಮಿ, ಆಶ್ವಾಸನೆ ಕೊಡಿ. ಇಂಗ್ಲಿಷ್ ಮೀಡಿಯಂ ಬೇಕು ಅಂತ ಅಲ್ಲ? ಕೇಳಿದ ಕಾಲೇಜು ಬೇಕು ಅಂತ ಅಲ್ಲ. ಕಲಿಯುವ ವಿದ್ಯಾರ್ಥಿಗಳಿಗೆ ಸೀಟು ಕೊಡುವ ಬಗ್ಗೆ ಆಶ್ವಾಸನೆ ಕೊಡಿ.

ಶ್ರೀ ಬಿ. ಸುಬ್ಬಯ್ಯ ಶೆಟ್ಟಿ.—ನಿಮ್ಮ ಕ್ಷೇತ್ರದಲ್ಲಿರುವ ಕಾಲೇಜಿನ ಮ್ಯಾನೇಜ್‌ಮೆಂಟಿನವರನ್ನು ಕರೆಸಿ ಕೇಳಿದೆ. ಅವರು ಹೇಳುತ್ತಾರೆ, ಇಂಗ್ಲಿಷ್ ಮೀಡಿಯಂ ಮಾತ್ರ ಬೇಕು ಅಂತ ಹೇಳುತ್ತಾರೆ. ಕನ್ನಡ ಮೀಡಿಯಂನಲ್ಲಿ ಸೀಟು ಇದೆ ಅದಕ್ಕೆ ಬರೋದಿಲ್ಲ ಎಂದು ಹೇಳಿದರು.

ಶ್ರೀ ಪಿ. ರಾಮದೇವ್.—ಗೌರ್ನಮೆಂಟ್ ಸೈನ್ಸ್ ಕಾಲೇಜು ಮತ್ತು ಆರ್ಟ್ಸ್ ಕಾಲೇಜಿನಲ್ಲಿ ಇಂಥ ಗಂಬೀರ ಪರಿಸ್ಥಿತಿ ಇದೆ. ಎಲ್ಲಿ ಮರ್ಡರ್ ಆಯ್ತೋ ಅಲ್ಲಿ ಇಂಥ ಪರಿಸ್ಥಿತಿ ಇದೆ. Those who want seat anywhere in the city they must be provided.

SRI B. SUBBIAH SHETTY.—About college admission ಸಾಧ್ಯವಿಲ್ಲ. I don't think I can undertake that stupendous task. I am frank enough to say that I cannot take that.

ಶ್ರೀ ಹುಳ್ಳೂರು ಆನಂದರಾವ್.—ಪ್ರೈಮರಿ ಸ್ಕೂಲ್ ಮತ್ತು ಹೈಸ್ಕೂಲ್‌ನಲ್ಲಿ ಸೀಟು ಕೊಡಿಸ್ತೀರಾ?

ಶ್ರೀ ಬಿ. ಸುಬ್ಬಯ್ಯ ಶೆಟ್ಟಿ.—ಕೊಡಿಸ್ತೇನೆ.

ಶ್ರೀ ಎ. ಲಕ್ಷ್ಮೀಸಾಗರ್.—ಎಲ್ಲರಿಗೂ ಕಾಲೇಜನಲ್ಲಿ ಎಜುಕೇಷನ್ ಕೊಡುವುದಕ್ಕಾಗುವುದಿಲ್ಲ ಎನ್ನುವ ವಾದವನ್ನು ಒಪ್ಪುತ್ತೇನೆ. ಆದರೆ ಕಾಲೇಜಿಗೆ ಸೇರತಕ್ಕಂಥ ಯೋಗ್ಯತೆಯನ್ನಾದರೂ ನಿರ್ಧಾರ ಮಾಡಬೇಕಾಗುತ್ತದೆ. ಶೇಕಡ ಇಷ್ಟು ಪರ್ಸೆಂಟ್ ಅಂಕಪಡೆದಿದ್ದರೆ ಮಾತ್ರ ಕಾಲೇಜಿಗೆ ಹೋಗುವುದಕ್ಕೆ ಸಾಧ್ಯ ಎನ್ನುವಂತ ಒಂದು ವ್ಯವಸ್ಥೆಯನ್ನಾದರೂ ಮಾಡಬೇಕು ? ಹಾಗೆ ಮಾಡಿದರೆ ಕಾಲೇಜಿನ ಗುಣಮಟ್ಟ ಶಿಕ್ಷಣದ ಗುಣಮಟ್ಟ ಉತ್ತಮವಾಗುತ್ತದೆ. ಮತ್ತೆ ಯೋಗ್ಯತೆ ಇಲ್ಲದೇ ಇರತಕ್ಕಂಥವರು ಕಾಲೇಜಿಗೆ ಹೋಗುವುದು ತಪ್ಪಿಹೋಗುತ್ತದೆ. ಈ ಬಗ್ಗೆ ಕಟ್ಟು ನಿಟ್ಟಾದ ತೀರ್ಮಾನ ತೆಗೆದುಕೊಳ್ಳದೆ ಹೋದರೆ ಏನು ಪ್ರಯೋಜನ ? ೧೦೦ ಸಲ ದಂಡಯಾತ್ರೆ ಹೊಡೆದಿದ್ದರೂ ಇನ್‌ಪ್ಲೂಯನ್ಸ್ ಇದ್ದವರು ಟೆಕ್ನಿಕಲ್ ಕಾಲೇಜಿಗೆ ಹೋಗುತ್ತಾರೆ. ಒಂದು ಸ್ಟ್ರಾಂಡರ್ಡ್ ಮೆಂಟೆಯಿನ್ ಮಾಡಿ. ವಿದ್ಯಾಭ್ಯಾಸದ ವಿಚಾರದಲ್ಲಿ ಒಂದು ಕಟ್ಟುನಿಟ್ಟಾದ ಕ್ರಮ ತೆಗೆದುಕೊಳ್ಳದೇ ಹೋದರೆ ದೇಶ ಉದ್ಧಾರವಾಗುವುದಿಲ್ಲ.

ಶ್ರೀ ಎಂ. ವಿ. ರಾಜಶೇಖರನ್.— ಸ್ವಾಮಿ ನಾನು ಕೇಳಿದ ಪ್ರಶ್ನೆಗೆ ಉತ್ತರ ಬರಲಿಲ್ಲ. ಮಹಾರಾಣಿ ಕಾಲೇಜಿನಲ್ಲಿ ನಾಲ್ಕುನೂರು ಸೀಟಿಗೆ ೨೦೦೦ ಜನ ಅರ್ಜಿ ಹಾಕಿಕೊಂಡಿದ್ದಾರೆ ಇದನ್ನು ಯಾವ ರೀತಿ ಬಗೆಹರಿಸುತ್ತಿರಿ ? ಕಟ್ಟಡಕ್ಕೆ ಸಿಮೆಂಟ್ ಒದಗಿಸುವ ಬಗ್ಗೆ ಏನು ವ್ಯವಸ್ಥೆ ಮಾಡುತ್ತೀರಿ ?

ಶ್ರೀ ಬಿ. ಸುಬ್ಬಯ್ಯ ಶೆಟ್ಟಿ.—ಎಷ್ಟು ಸೀಟು ಇದೆಯೋ ಅಷ್ಟು ಕೊಡಬೇಕಾಗುತ್ತದೆ.

ಶ್ರೀ ಎಂ. ವಿ. ರಾಜಶೇಖರನ್.—ಉಳಿದವರೆಲ್ಲಾ ಏನು ಮಾಡಬೇಕು ?

ಶ್ರೀ ಬಿ. ಸುಬ್ಬಯ್ಯ ಶೆಟ್ಟಿ.—ಬೇರೆ ಬೇರೆ ಕಾಲೇಜುಗಳು ಇವೆ. ಆ ಕಾಲೇಜುಗಳಿಗೆ ಹೋಗಿ ಸೇರಿಕೊಳ್ಳಿರಿ ಅಷ್ಟೆ.

ಶ್ರೀ ಪಿ. ರಾಮದೇವ್.—ಒಂದು ಕಡೆ ಕಾಲೇಜನಲ್ಲಿ ಸೀಟು ಇಲ್ಲ ? ಒಂದು ಕಡೆ ಮದುವೆ ಇಲ್ಲ. ಮದುವೆ ಇಲ್ಲದವರಿಗೆ ಮದುವೆಯನ್ನಾದರೂ ಮಾಡಿ.

MR. CHAIRMAN.—Sri Ramadev made a point that they are not getting married. Is it the concern of the House?

ಶ್ರೀ ಯು. ಬಿ. ಬೋರ್ಕರ್.—ಖಾಸಗಿ ಕಾಲೇಜುಗಳಲ್ಲಿ ಯಾರಿಗೆ ಡೊನೇಷನ್ ಕೊಡುವುದಕ್ಕೆ ಸಾಧ್ಯವಿದೆಯೋ ಅಂಥವರು ಹೋಗಿ ಸೇರುತ್ತಾರೆ. ಸರ್ಕಾರಿ ಕಾಲೇಜುಗಳಲ್ಲಿ ಬಡ ಜನ ಬರುತ್ತಾರೆ. ವಿಶೇಷವಾಗಿ ಹರಿಜನರು ಹಿಂದುಳಿದವರು ಬರುತ್ತಾರೆ. ಮಹರಾಣಿ ಕಾಲೇಜಿನಲ್ಲಿಯೂ ಕೂಡ ಹರಿಜನರು ಮತ್ತು ಹಿಂದುಳಿದವರು ಬಡಜನ ಬಂದು ಸೇರುತ್ತಾರೆ. ೪೦೦ ಸೀಟುಗಳನ್ನು ಹೆಚ್ಚಿಗೆ ಮಾಡುವುದಕ್ಕಾಗುವುದಿಲ್ಲವೆ? ೧೬೦೦ ಜನಕ್ಕೆ ಏನು ವ್ಯವಸ್ಥೆ ಮಾಡುತ್ತೀರಾ ?

MR. CHAIRMAN.—Sufficient discussion has taken place As far as Government is concerned, they will take that also into consideration.

ಶ್ರೀ ಎಂ. ವಿ. ರಾಜಶೇಖರನ್.—ಹಣ ಇದ್ದವರಿಗೆ ಮಾತ್ರ ವಿದ್ಯಾಭ್ಯಾಸ. ಹಣ ಇಲ್ಲದಿದ್ದವರಿಗೆ ವಿದ್ಯಾಭ್ಯಾಸ ಇಲ್ಲವೆ ?

MR. CHAIRMAN.—I think that point can be raised when the Demand on Education comes up for discussion.

ಶ್ರೀಮತಿ ಎಸ್. ಪ್ರಮೀಳ.—೧೬೦೦ ಜನ ಹೆಣ್ಣು ಮಕ್ಕಳಿಗೆ ಸೀಟು ಕೊಡುವುದಿಲ್ಲವೆಂದರೆ ಮಂತ್ರಿಗಳ ಮನೆಗೆ ಅವರನ್ನು ಕರೆದುಕೊಂಡು ಹೋಗಬೇಕಾಗುತ್ತದೆ.

MR. CHAIRMAN.—He has already stated that there are already 400 students and over and above that they have to make alternative arrangements.

I will close this matter. We can take up next item in the agenda, the non-official resolutions.